ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, 19th March 1975/Phalguna 28, 1896 S.E.

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

KARNATAKA APPOPRIATION BILL, 1975

(*Motion to consider*)

Sri M. Y. GHORPADE (Minister for Finance and Housing).—Madam, I move :-

"That the Karnataka Appropriation Bill, 1975 be tak n into consideration."

MADAM SPEAKER.—Motion moved :—

"That the Karnataka Appropriation Bill, 1975 be taken into consideration."

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಅರ್ಥ ಸಚಿವರು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಅಂಗೀಕಾರ ಆದಮೇಲೆ ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ಸಭೆಯ ಅಂಗೀಕಾರಕ್ಕೋಸ್ಕರ ಈ ಸಭೆಯ ಮುಂದಿಟ್ಟಿದ್ದಾರೆ, ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಕೆಲವು ಹೊಸ ಸರ್ವಿಸ್‌ಗಳನ್ನು ತೋರಿಸಿದ್ದಾರೆ ಮತ್ತು ಕೆಲವು ಹೆಚ್ಚು ವೆಚ್ಚವನ್ನು ತುಂಬಿಕೊಳ್ಳುವುದಕ್ಕೆ ಈ ಮನೆಯ ಅಂಗೀಕಾರ ಕೇಳಿದ್ದಾರೆ, ಅದರ ಬಗ್ಗೆ ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡಬೇಕಾಗುತ್ತದೆ. ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಕಳೆದ ಸಾರಿ ಚರ್ಚೆ ಇಲ್ಲದೆ, ಈ ಸಭೆಯಲ್ಲಿ ಅಂಗೀಕಾರವಾಗಿದೆ. ಇವತ್ತು ಈ ಅಪ್ರೋಪ್ರಿಯೇಷನ್ ಬಿಲ್ ಮೇಲೆ ಮಾತನಾಡತಕ್ಕ ಕಾಲದಲ್ಲಿ ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಬೇಕಾಗಿದೆ ಎನ್ನುವ ದೃಷ್ಟಿಯಿಂದ ನಿನ್ನೆ ನಾನು ತಮ್ಮಲ್ಲಿ ಮನವಿ ಮಾಡಿದಾಗ, ತಾವು ಇದನ್ನು ಈಗ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ.

---

†Indicates that remarks or speeches have not been revised by the member concerned.

ಡಿಮ್ಯಾಂಡ್ ನಂಬರ್ ಒಂದರಲ್ಲಿ 94 ಲಕ್ಷ 80 ಸಾವಿರ ರೂಪಾಯಿ ಕೇಳಿದ್ದೀರಿ. The election commission of India has taken up revision of Electroal Rolls of all the newly delimited 224 Assembly constituencies and has directed that the materials required for conducting elections to parliament should be kept ready by the end of February 1975. ಇದಕ್ಕೋಸ್ಕರ ಸುಮಾರು 40 ಲಕ್ಷ ರೂಪಾಯಿಗಳನ್ನು ಒದಗಿಸತಕ್ಕ ಪ್ರಯತ್ನ ಮಾಡಿದ್ದೀರಿ. ಮಾನ್ಯ ಸಭಾಧ್ಯಕ್ಷಣಿಯವರೆ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳದೇ ಹೋದರೆ ನನ್ನ ಕರ್ತವ್ಯ ಲೋಪ ಮಾಡಿದ ಹಾಗೆ ಆಗುತ್ತದೆ. ಈ ಮನೆಯಿಂದ ಡೀ ಲಿಮಿಟೇಷನ್ ಕಮಿಷನ್‌ನಲ್ಲಿ ಅಸೋಷಿಯೇಟ್ ಮೆಂಬರ್ ಆಗಿ ಕೆಲಸ ಮಾಡುವುದಕ್ಕೆ ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಇವೊತ್ತು ಚುನಾವಣಾ ಕಮಿಷನ್ ಎಷ್ಟುಮಟ್ಟಿಗೆ, ಯಾವುದೇ ತರಹವಾದಂಥ ಹಸ್ತಕ್ಷೇಪ ಇಲ್ಲದೇ ಕೆಲಸ ಮಾಡುವುದಕ್ಕೆ ಸಾಧ್ಯ ಇದೆಯೋ ಎನ್ನುವ ಬಗ್ಗೆ ನನ್ನದೇ ಆದ ಸಂಶಯ ಇದೆ. ಆ ಸಂಶಯವನ್ನು ವ್ಯಕ್ತಪಡಿಸತಕ್ಕ ಕಾಲದಲ್ಲಿ, ಆಧಾರ ಇಲ್ಲದೇ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ಅದು ಒಂದು ಮನೆಯ ಪತಿಯಿಂದ ಕಳುಹಿಸಿಕೊಟ್ಟ ಮೇಲೆ ಅಲ್ಲಿ ಮೂರು ನಾಲ್ಕು ಜನ ಇದ್ದರೆ, ಈ ಮನೆಯಿಂದ ಹೋದಂಥ ಸದಸ್ಯರು ಏನಾದರೂ ಸಲಹೆ ಕೊಟ್ಟರೆ ಆ ರೀತಿ ಕೊಡತಕ್ಕ ಸಲಹೆ ಏನು ಇದೆ, ಆ ಸಲಹೆಗೆ ಕಮಿಷನ್‌ನಲ್ಲಿ ಮಾನ್ಯತೆ ಕೊಟ್ಟಿರುವುದನ್ನು ನಾನು ಕಾಣಲಿಲ್ಲ. ಕಾರಣ ಇಷ್ಟೇ, ಒಂದು ಕ್ಷೇತ್ರ ಪುನರ್‌ವಿಂಗಡಣೆ ಮಾಡತಕ್ಕ ಕಾಲದಲ್ಲಿ ಅವರು ಅನುಸರಿಸತಕ್ಕ ನೀತಿಯಿಂದ ಯಾವುದೇ ಒಂದು ಅಪಾದನೆಗೆ ಒಳಗಾಗದ ರೀತಿಯಲ್ಲಿ ಅವರು ನಡೆದುಕೊಂಡಿಲ್ಲ ಎನ್ನತಕ್ಕಂಥಾದ್ದು ವ್ಯಕ್ತವಾಗುತ್ತದೆ. ಈಗಾಗಲೇ ಅವರು ಪ್ರಕಟಪಡಿಸಿರತಕ್ಕ ಪುನರ್‌ವಿಂಗಡಣೆಯ ಅಂತಿಮ ಪಟ್ಟಿಯನ್ನು ನೋಡಿದರೆ ಇದನ್ನು ಈ ಮನೆಯ ಗಮನಕ್ಕೆ ತರತಕ್ಕದ್ದು ಉಚಿತ ಎನ್ನುವ ಮಾತನ್ನು ಹೇಳುತ್ತೇನೆ ಈಗ ಹರಿಜನ ಗಿರಿಜನರ ಸ್ಥಾನಗಳನ್ನು ಮೀಸಲು ಇಡತಕ್ಕ ಕಾಲದಲ್ಲಿ ಯಾವಯಾವ ಕ್ಷೇತ್ರಗಳನ್ನು ಮೀಸಲಿಡುವ ನಿರ್ಣಯ ತೆಗೆದುಕೊಳ್ಳುವಾಗ ನಾನು ಒಂದು ಮಾತನ್ನು ಹೇಳಿದ್ದೇನೆ. ಒಂದು ನಾರ್ಮ್ಸ್ ಇಟ್ಟುಕೊಳ್ಳಿ. ಸಂಖ್ಯೆ ಆಧಾರದ ಮೇಲೆ ಸಂಖ್ಯೆ ಪ್ರಮಾಣ ಎಲ್ಲಿ ಹೆಚ್ಚು ಇರುತ್ತದೆ ಅಲ್ಲಿ ಮೀಸಲು ಸ್ಥಾನ ಇಡುವುದಾದರೆ ನನ್ನ ಅಭ್ಯಂತರವಿಲ್ಲ. ರೊಟೇಷನ್ ಸಿಸ್ಟಂ ಮಾಡುವುದಕ್ಕೆ ಕಮಿಷನ್ ನವರು ನಿರ್ಣಯ ತೆಗೆದುಕೊಳ್ಳುವುದಾದರೆ ಒಳ್ಳೆಯದು ಎಂದು ತಿಳಿಸಿದ್ದೆ. ಇದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಎಲೆಕ್ಷನ್ ಕಮಿಷನ್‌ನವರು ಹಲವಾರು ಹಸ್ತಕ್ಷೇಪಗಳಿಗೆ ಒಳಗಾಗಿ ಕೆಲಸ ಮಾಡುತ್ತಿದ್ದಾರೆ. ಒಂದು ನಿರ್ಣಯವಾದ ಕೆಲಸವನ್ನು ಮಾಡುತ್ತಿಲ್ಲ ಎನ್ನುವುದಕ್ಕೆ ಉದಾಹರಣೆ ಕೊಡುತ್ತೇನೆ. ಷೆಡ್ಯೂಲ್ಡ್ ಕ್ಯಾಸ್ಟ್ ರಿಸರ್ವೇಷನ್ ಕಾನ್‌ಸ್ಟಿಟ್ಯುಯೆನ್‌ಸಿ ಡೀ ಲಿಮಿಟ್ ಮಾಡತಕ್ಕ ಕಾಲದಲ್ಲಿ ಸಂಖ್ಯೆ ಆಧಾರ ಒಂದು ಕಡೆ, ಎಲ್ಲಿ ಹೆಚ್ಚು ಸಂಖ್ಯಾಬಲ ಇರುತ್ತದೆ ಅಲ್ಲಿ ಕೊಡಬೇಕಾಗುತ್ತದೆ. ಈ ಮಾತನ್ನು ಸದಸ್ಯರು ಗಮನದಲ್ಲಿ ಇಟ್ಟುಕೊಳ್ಳಬೇಕು. ಎಲ್ಲಿ ಕಂಟಿಗ್ಯುಟಿ ಬರುತ್ತದೆ. ಒಂದು ತಾಲ್ಲೋಕು ಪಕ್ಕದ ತಾಲ್ಲೋಕ್ ಜನಸಂಖ್ಯೆ ಆಧಾರ ಹೆಚ್ಚು ಇದ್ದರೆ ಅವಾಗ ಮಾಡುವುದಕ್ಕಾಗುವುದಿಲ್ಲ. ಕಂಟಿಗ್ಯುಟಿಯಾಗುತ್ತದೆ, ಅದನ್ನು ಮಾಡಬಾರದು. ಹೈಯಸ್ಟ್ ಪಾಪ್ಯುಲೇಷನ್ ಎಲ್ಲಿದೆ ಆ ಕ್ಷೇತ್ರಕ್ಕೆ ಹೋಗುತ್ತದೆ. ಈಗ ಡೀ ಲಿಮಿಟೇಷನ್ ಕಮಿಷನರವರ ಪ್ರಕಾರ ಮಾಡಿರತಕ್ಕ ಕ್ಷೇತ್ರದ ಮರುವಿಂಗಡಣಾ ಪಟ್ಟಿ ಇದೆ, ಅದನ್ನು ನೋಡಿದರೆ ಗೊತ್ತಾಗುತ್ತದೆ. ಯಾವುದೇ ನಾರಮ್ಸ್ ಅವರು ಪಾಲಿಸಿಲ್ಲ ಈ ಕೆಳಗಡೆ ಕಂಟಿಗ್ಯುಟಿ ಬರುತ್ತದೆ, ಕೋಲಾರ ಜಿಲ್ಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಪಾಪ್ಯುಲೇಷನ್ ಹೆಚ್ಚು ಇದ್ದರೆ ಕೊಡುತ್ತಾರೆ. ಈ ಒಂದು ಆಧಾರ ಇಟ್ಟುಕೊಳ್ಳುವುದಾದರೆ ಎಲ್ಲೆಲ್ಲಿ ಪಾಪ್ಯುಲೇಷನ್ ಹೆಚ್ಚು ಇದೆ ಅಲ್ಲಿ ಕೊಡಬೇಕು ಕಂಟಿಗ್ಯುಟಿ ಆಧಾರ ಇಟ್ಟುಕೊಳ್ಳುವುದಾದರೆ, ಅಕ್ಕಪಕ್ಕದ ತಾಲ್ಲೋಕುಗಳು ಬಂದಾಗ ಇದು ಬಿಟ್ಟು ಬೇರೆ ತಾಲ್ಲೋಕು ಮಾಡುತ್ತಾರೆ, ಅದೇನೆಂದರೆ ಯಾವ ಜಾಗದಲ್ಲಿ ಮಾಡಬೇಕು ಎರಡಕ್ಕೂ ತಿಲಾಂಜಲಿ ಕೊಟ್ಟಿದ್ದಾರೆ. ಹೊಸಕೋಟೆ, ಆನೇಕಲ್ ಹೆಚ್ಚು ಬೆಂಗಳೂರು ಜಿಲ್ಲೆಯಲ್ಲಿ ಸಂಖ್ಯೆ ಆಧಾರದ ಮೇಲೆ ನಿರ್ಣಯ ಮಾಡುವುದಾದರೆ ಮಾಡಬೇಕಾಗುತ್ತದೆ ಅದನ್ನು ಬಿಟ್ಟು ಚಿಕ್ಕಬಳ್ಳಾಪುರ ಯಲಹಂಕ, ದೇವನಹಳ್ಳಿ ಮತ್ತು ನೆಲಮಂಗಲ ಈ ನಾಲ್ಕು ಒಂದೇ ಕಂಟಿಗ್ಯುಟಿ ಬರುತ್ತದೆ. ಅವರ ಮನಸ್ಸಿಗೆ ಬಂದಹಾಗೆ ವರ್ತನೆ ಮಾಡುತ್ತಾರೆ. ಈಗ ಸರಿಯಾದ ರೀತಿಯಲ್ಲಿ ಚುನಾವಣಾ ಆಯೋಗ ಕೆಲಸ ಮಾಡುತ್ತಿಲ್ಲ ಎನ್ನುವುದನ್ನು ನಿರ್ದಾಕ್ಷಿಣ್ಯವಾಗಿ ಹೇಳಬಹುದು. ಯಾವ ನಿರೀಕ್ಷಣೆ ಇಟ್ಟುಕೊಂಡಿದ್ದೆವೋ ಆ ರೀತಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲ. ಒಂದು ಉದಾಹರಣೆ ಕೊಟ್ಟರೆ ಸಾಕಾಗುತ್ತದೆ ಎಂದು ಈ ಸಮಯದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಮಾನ್ಯ ಸಭಾಧ್ಯಕ್ಷಣಿಯವರೇ, ಚುನಾವಣಾ ಕಮಿಷನ್ ಯಾವರೀತಿ ಹಸ್ತಕ್ಷೇಪ ಇರಬಾರದು, ಸರ್ಕಾರದ ಹಸ್ತಕ್ಷೇಪ ಇರಬಾರದು ಎನ್ನುವ ಒಂದು ಧ್ಯೇಯವನ್ನು ಒಪ್ಪಿಕೊಂಡಿದ್ದರು ಕೂಡ ಆ ಒಂದು ಕೆಲಸದಲ್ಲಿ

ಸಾಧನೆಯಾಗಲಿಲ್ಲ. ಈಗ ಸರ್ಕಾರ ಕೇಂದ್ರ ಸರ್ಕಾರದ ಗುಲಾಮಗಿರಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಕೆಲವು ನಿದರ್ಶನಗಳನ್ನು ಕೊಡುತ್ತೇನೆ. ಕೆಲವು ರಾಜ್ಯಗಳಲ್ಲಿ ಚುನಾವಣೆ ನಡೆಸತಕ್ಕಂಥಾದ್ದಕ್ಕೆ ನಿರ್ಣಯ ಮಾಡಿ ಪಬ್ಲಿಷ್ ಮಾಡಿದ ಮೇಲೆ ತುರ್ತಾಗಿ ಮಾಡಿದ್ದಾರೆ ಏತಕ್ಕೆ ಮಾಡಿದ್ದಾರೆ. ಅದು ತಾನೇ ಇಂಡಿಪೆಂಡೆಂಡ್ ಆಗಿ ಕೆಲಸ ಮಾಡಬೇಕು, ಕೆಲಸ ಮಾಡತಕ್ಕ ಕಾಲದಲ್ಲಿ ಯಾವುದೇ ಸರ್ಕಾರದ ದಾಕ್ಷಿಣ್ಯಕ್ಕೆ ಒಳಗಾಗಬಾರದು. ಕೇರಳದಲ್ಲಿ ಬೈ ಎಲೆಕ್ಷನ್ ಮಾಡಬೇಕು ಎಂದು ಪಬ್ಲಿಷ್ ಮಾಡಿದರು ಅದು ಆದಮೇಲೆ ತಡೆಹಿಡಿದರು. ಎಲ್ಲಿ ಸರ್ಕಾರಕ್ಕೆ ಅನುಕೂಲ ಇರುತ್ತದೆ ನೋಡಿಕೊಂಡು ಆ ಸಂದರ್ಭಕ್ಕೆ ಅನುಗುಣವಾಗಿ ಚುನಾವಣೆ ನಡೆಸುತ್ತಾರೆ. ಎಂದರೆ ಒಂದು ಒಂದು ಸರ್ಕಾರಿ ಇಲಾಖೆ ಎಂದು ಪರಿಗಣನೆ ಮಾಡಬೇಕಾಗುತ್ತದೆ. ಚುನಾವಣಾ ಕಮಿಷನ್ ನಿರ್ಣಯವನ್ನು ನಿರ್ಭಯವಾಗಿ ಯಾವುದೇ ಹಸ್ತಕ್ಷೇಪಕ್ಕೆ ಒಳಗಾಗದೆ ಕೆಲಸ ಮಾಡುತ್ತಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈಗ ಚುನಾವಣಾ ಕಮಿಷನ್ ಜನತೆಯ ವಿಶ್ವಾಸ ಕಳೆದುಕೊಳ್ಳತಕ್ಕ ಪರಿಸ್ಥಿತಿ ಬಂದಿದೆ ಎಂದು ಕೆಲವು ನಿದರ್ಶನಗಳನ್ನು ಕೊಡುವ ಮುಖೇನ ಚುನಾವಣಾ ಕಮಿಷನ್ ಕೆಲಸದ ಬಗ್ಗೆ ಈ ಒಂದು ಸರ್ಕಾರ ಯಾವುದೇ ಒಂದು ನಿರ್ಣಯ ತೆಗೆದುಕೊಳ್ಳಲಿಕ್ಕೆ ಸಾಧ್ಯ ಇಲ್ಲದಿದ್ದರೆ ನಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುತ್ತೇವೆ. ಈ ಒಂದು ಸಂದರ್ಭದಲ್ಲಿ 40 ಲಕ್ಷ ರೂಪಾಯಿ ಹಣವನ್ನು ಒದಗಿಸುತ್ತಿದ್ದಾರೆ, ಮುಂಬರತಕ್ಕ ಸಾರ್ವತ್ರಿಕ ಚುನಾವಣೆ ಸಂದರ್ಭದಲ್ಲಿ ಇಲಾಖೆಯಲ್ಲಿ ತಯಾರು ಮಾಡುವುದಕ್ಕೆ ಹಣ ಒದಗಿಸಿದ್ದಾರೆ ಇದನ್ನು ಈ ಸಂದರ್ಭದಲ್ಲಿ ಹೇಳದೇ ಗತ್ಯಂತರ ಇಲ್ಲ ಎಂದು ಈ ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ವಿಷಯವಾಗಿ ಚುನಾವಣಾ ಮತದಾರರ ಪಟ್ಟಿ ತಯಾರು ಮಾಡುವುದು ನನ್ನ ಅನುಭವದಲ್ಲಿ ಎಷ್ಟು ತರಾತುರಿ ಇದೆ. ಆ ಪಟ್ಟಿಯಲ್ಲಿ ಕೆಲವು ಹೆಸರು ಬಿಟ್ಟುಹೋಗಿದ್ದರೆ, ಮತ್ತೆ ಹೊಸದಾಗಿ ಸೇರಿಸಬೇಕಾದ್ದು ಇದ್ದರೆ, ನಂತರ ಅದರ ಬಗ್ಗೆ ಏನಾದರೂ ತಿದ್ದುಪಡಿ ಮಾಡತಕ್ಕಂಥಾದ್ದು ಇದ್ದರೆ ಅದನ್ನು ಚಾವಡಿಯಲ್ಲಿ ಇಟ್ಟು ಪರಿಶೀಲನೆ ಮಾಡುವುಕ್ಕೆ ಮೂರು ನಾಲ್ಕು ದಿವಸ ಕಾಲ ಕೊಟ್ಟಿದ್ದಾರೆ. ಬಹುಶಃ ಯಾರಿಗಾದರೂ ಪ್ರಾಕ್ಟಿಕಲ್ ಆಗಿ ಮಾಡಲು ಸಾಧ್ಯ ಇದೆಯೇ ಎಂದು ಯೋಚನೆ ಮಾಡಬೇಕು, ಆ ಪಟ್ಟಿಯನ್ನು ನೋಡಲಿಕ್ಕೆ ಸಾಧ್ಯವಾಗುವುದಿಲ್ಲ, ತರಾತುರಿಯಾಗಿ ಮಾಡಿದರು. ಇನ್ನು ಪಾರ್ಲಿಮೆಂಟ್ ಎಲೆಕ್ಷನ್ ನಡೆಯತಕ್ಕದ್ದು ಒಂದು ವರ್ಷ ಇದೆ ಅಸೆಂಬ್ಲಿ ಎಲೆಕ್ಷನ್ ಎರಡು ವರ್ಷ ಇದೆ. ಆದುದರಿಂದ ಆ ಪಟ್ಟಿಯನ್ನು ಪರಿಶೀಲಿಸಲಿಕ್ಕೆ ಕನಿಷ್ಟಪಕ್ಷ 15 ದಿವಸವಾದರೂ ಬೇಡವೇ ? ಕೇವಲ ಮೂರು ದಿವಸದಲ್ಲಿ ಯಾರು ತಾನೇ ಪರಿಶೀಲನೆ ಮಾಡಿ ಅದರಲ್ಲಿ ಇರತಕ್ಕ ಲೋಪದೋಷಗಳನ್ನು ತಿದ್ದುಪಡಿ ಮಾಡತಕ್ಕಂಥಾದ್ದಕ್ಕೆ ಸಲಹೆ ಕೊಡಲಿಕ್ಕೆ ಹೇಗೆ ಸಾಧ್ಯ. ಗ್ರಾಮಾಂತರ ಪ್ರದೇಶಗಳಲ್ಲಿ ಡ್ರಾಫ್ಟ್ ನೋಟಿಫಿಕೇಷನ್ ಇಡಲಿಲ್ಲ. ತಾಲ್ಲೋಕು ಮಟ್ಟದಲ್ಲಿ ನಾಲ್ಕಾರು ಕೇಂದ್ರಗಳಲ್ಲಿ ಇಟ್ಟರೆ ಸಾಧ್ಯವಾಗುವುದಿಲ್ಲ. ಮತದಾರರ ಪಟ್ಟಿ ಮಾಡುತ್ತೀರಿ, ಇದರಲ್ಲಿ ಪೂರ್ಣ ಲೋಪದೋಷ ಇದೆ ಇದಕ್ಕೆ ಕಾರಣ ನೀವೇ ಜವಾಬ್ದಾರರು. ಮೊನ್ನೆ ತಾಲ್ಲೋಕು ಬೋರ್ಡ್ ಚುನಾವಣೆಗಳಲ್ಲಿ 18 ಸಾವಿರ ಮತದಾರರು ಬಿಟ್ಟುಹೋಗಿದೆ ಎಂಬ ಕಾರಣ ಮುಂದೂಡಿ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋದಿರಿ. ಇದಕ್ಕೆ ಯಾರು ಕಾರಣ ? ಯಾರು ಆಡಳಿತವನ್ನು ನಡೆಸುತ್ತಿದ್ದಾರೆ ಅವರೇ ಇದರ ಹೊಣೆಯನ್ನು ಹೊರಬೇಕಾಗಿದೆ. ಓಟರ್ಸ್ ಲಿಸ್ಟ್‌ನ್ನು ಸರಿಯಾಗಿ ಮಾಡದೇ ಹೋದರೆ ಯೋಗ್ಯಮಟ್ಟದಲ್ಲಿ, ಉತ್ತಮ ಮಟ್ಟದಲ್ಲಿ ಚುನಾವಣೆ ನಡೆಯುತ್ತದೆಯೇ ಎನ್ನುವುದನ್ನು ನಿಮ್ಮಿಂದ ಕೇಳಬಯಸುತ್ತೇನೆ. ಮತದಾರರ ಪಟ್ಟಿಯನ್ನು ಪಬ್ಲಿಷ್ ಮಾಡಿದ್ದೀರಿ. ಅದರಲ್ಲಿರತಕ್ಕ ಲೋಪದೋಷಗಳನ್ನು ತಿದ್ದಿಕೊಳ್ಳುವುದಕ್ಕೆ ಸಾಕಷ್ಟು ಕಾಲವನ್ನು ಕೊಡುವುದು ಒಳ್ಳೆಯದು ಎನ್ನುವ ದೃಷ್ಟಿಯಿಂದ ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ವಿದೇಶಗಳಲ್ಲಿ ಚುನಾವಣೆ ಬಗ್ಗೆ ಕೋಡ್ ಆಫ್ ಕಾಂಡಕ್ಟ್ ಹಾಕಿಕೊಂಡಿದ್ದಾರೆ ಎಂದು ನಾನು ಕೇಳಿದ್ದೇನೆ. ನಮ್ಮಲ್ಲಿ ಇನ್ನೂ ಆ ಮಟ್ಟಕ್ಕೆ ಬೆಳೆದಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಯಾವುದೇ ರಾಜಕೀಯ ಪಕ್ಷ ಇರಲಿ ಅಧಿಕಾರದಲ್ಲಿರತಕ್ಕ ಕಾಲದಲ್ಲಿ ತಮ್ಮ ಎಲ್ಲ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತದೆ ; ಅದು ಅವಿಭಕ್ತ ಕಾಂಗ್ರೆಸ್ ಇರಲಿ, ವಿಭಕ್ತ ಕಾಂಗ್ರೆಸ್ ಇರಲಿ, ಅಥವಾ ತಮಿಳುನಾಡಿನಲ್ಲಿ ಡಿ.ಎಂ.ಕೆ. ಸರ್ಕಾರ ಇರಲಿ, ಅಧಿಕಾರದಲ್ಲಿರತಕ್ಕ ರಾಜಕೀಯ ಪಕ್ಷಗಳು ಸರ್ಕಾರದ ಯಂತ್ರಗಳನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಇತಿಮಿತಿ ಇಲ್ಲವಂತಾಗಿದೆ. ಇದಕ್ಕೆ ಒಂದು ನಿದರ್ಶನ ಕೊಡುವುದಾದರೆ, ಮೊನ್ನೆ ಅರಸೀಕೆರೆಯಲ್ಲಿ ನಡೆದಂಥ ಉಪ ಚುನಾವಣೆಯಲ್ಲಿ ಮುಖ್ಯ ಮಂತ್ರಿಗಳು, ಮತ್ತು ಸುಮಾರು 14 ಜನ ಅಲ್ಲಿ ಕ್ಯಾಂಪ್, ಇದು ಏಕೆ, ಒಳ್ಳೆಯ ಆಡಳಿತ ಕೊಟ್ಟಿದ್ದರೆ,

ದೇಶದ ಜನತೆಯ ಮುಂದೆ ಹೇಳಬೇಕು, ನನ್ನ ಆಡಳಿತದಲ್ಲಿ ನಿಮಗೆ ವಿಶ್ವಾಸ ಇದ್ದರೆ, ಪ್ರೇಮ ಇದ್ದರೆ, ನಾನು 3 ವರ್ಷ ಆಡಳಿತ ಕೊಟ್ಟಿದ್ದೇನೆ, ನನ್ನ ಬಗ್ಗೆ ನಿಮಗೆ ಸಮಾಧಾನ ಇದ್ದರೆ ಮತ ಕೊಡಿ ಎಂದು ಎರಡು ಕಡೆ ಭಾಷಣ ಮಾಡಬೇಕಾಗಿತ್ತು. ಆದರೆ ಗಲ್ಲಿ ಗಲ್ಲಿ ತಿರುಗುವುದು ಮನೆ ಮನೆ ತಿರುಗುವುದು, ಕೇರಿ ಕೇರಿ ತಿರುಗುವುದು, ಎಲ್ಲರ ಮನೆಗೆ ಹೋಗಿ ಕುಳಿತುಕೊಳ್ಳುವುದು, ಈ ರೀತಿ ಮಾಡಿದರೆ ಮುಖ್ಯ ಮಂತ್ರಿಯವರ ಸ್ಥಾನ ಯಾವ ಮಟ್ಟಕ್ಕೆ ಹೋಗುತ್ತದೆ, ಕೆಳಮಟ್ಟಕ್ಕೆ ಹೋಗುವುದಿಲ್ಲವೇ ? ಒಂದು ಸೀಟ್ ಬರುತ್ತದೆ, ಹೋಗುತ್ತದೆ. ನಮ್ಮ ಪಕ್ಷದ್ದು ಒಂದು ಸೀಟ್ ಗೆದ್ದು ಬಂದರೆ ಸರ್ಕಾರ ಫಾರಂ ಮಾಡುವುದಕ್ಕೆ ಆಗುವುದಿಲ್ಲ. ಅವರ ಪಕ್ಷದ್ದೇ ಒಂದು ಸೀಟ್ ಹೋದರೂ ಅವರ ಸರ್ಕಾರ ಏನು ಬಿದ್ದು ಹೋಗುವುದಿಲ್ಲ. ಚುನಾವಣೆ ನಡೆಸತಕ್ಕದ್ದರಲ್ಲಿ ಮುಖ್ಯ ಮಂತ್ರಿಯಾದವರು ಘನತೆ-ಗಾಂಭೀರ್ಯ ಉಳಿಸಿಕೊಳ್ಳಬೇಕು.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ಸಮಾಜವಾದ ಒಪ್ಪಿಕೊಂಡಮೇಲೆ ಮನೆ ಮನೆಗೆ ಹೋಗಬಾರದೇ ?

ಶ್ರೀ ಎಚ್. ಡಿ. ದೇವೇಗೌಡ.—ಹೆಂಡದ ಸೀಸೆ ಹಿಡಿದುಕೊಂಡು ಹೋಗುವುದಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಶ್ರೀಮಾನ್ ವೀರೇಂದ್ರಪಾಟೀಲರು ಅವರ ಚುನಾವಣೆ ಕಾಲದಲ್ಲಿ ಮನೆ ಮನೆಗೆ ಕೈಜೋಡಿಸಿಕೊಂಡು ಹೋಗಿ ಕೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಪುಟ್ಟಸ್ವಾಮಿಯವರು ಇಲ್ಲೇ ಕುಳಿತಿದ್ದಾರೆ. ನಿಮಗಿಂತ ಅವರಿಗೆ ಗೊತ್ತಿದೆ, ಅವರು ಹೇಳಲಿ, ಹಿಂದೆ ಬೈ ಎಲೆಕ್ಷನ್ ನಡೆದಿದೆ. ಈ ಬೈ ಎಲೆಕ್ಷನ್‍ನಲ್ಲಿ 15 ಜನ ಮಂತ್ರಿಗಳು ಕ್ಯಾಂಪ್ ಹಾಕಿಕೊಂಡು ಕೂತಿದ್ದಾರೆ. ಶ್ರೀಮತಿ ಇ. ಇ. ವಾಜ್ ಅವರು ಪೋಲಿಂಗ್ ಬೂತ್ ಒಳಗೆ ಹೋಗುವುದಕ್ಕೆ ಹೋದರು ; ಬೊಬ್ಬಾಟ ಆಯಿತು. ಮಂತ್ರಿಗಳು ಆದವರು ಈ ರೀತಿ ಮಾಡಿದರೆ ಸರ್ಕಾರದ ಗೌರವ ಕಡಿಮೆಯಾಗುತ್ತದೆ, ಇವತ್ತು ಚುನಾವಣೆ ಬಗ್ಗೆ ಜನತೆಗೆ ವಿಶ್ವಾಸ ಹೊರಟುಹೋಗುತ್ತದೆ. ಮಂತ್ರಿಗಳಾಗಲೀ, ಮುಖ್ಯ ಮಂತ್ರಿಗಳಾಗಲೀ, ಬೇರೆ ರಾಜಕೀಯ ಪಕ್ಷಗಳಾಗಲೀ ಚುನಾವಣೆ ಸಂದರ್ಭದಲ್ಲಿ ಒಂದು ಕೋಡ್ ಆಫ್ ಕಂಡಕ್ಟ್ ಹಾಕಿಕೊಂಡು ಕೆಲಸ ಮಾಡದೇ ಹೋದರೆ, ಚುನಾವಣೆ ಬಗ್ಗೆ ಜನತೆಗೆ ವಿಶ್ವಾಸ ಹೋಗುತ್ತದೆ, ಯಾರೋ ದುಡ್ಡು ಇರುವವರು ಗೆದ್ದು ಬರುತ್ತಾರೆ ಎನ್ನುವ ಭಾವನೆ ಜನತೆಯಲ್ಲಿ ಬೆಳೆಯುವುದಕ್ಕೆ ಪ್ರಾರಂಭವಾಗುತ್ತದೆ; ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. 18-20 ಜನ ಮಂತ್ರಿಗಳು ಅಲ್ಲಿಗೆ ಹೋದರು. ಅಧಿಕಾರವಲ್ಲಿತಕ್ಕವರು ಒಳ್ಳೆಯ ಕೆಲಸಮಾಡಿದರೆ ಜನತೆಯೂ ಪ್ರೀತಿವಿಶ್ವಾಸದಿಂದ ಕೆಲಸಮಾಡುತ್ತಾರೆ. ಸೀಮೆ ಎಣ್ಣೆ ಟ್ಯಾಂಕರ್‌ಗಳು, ಪೆಟ್ರೋಲ್ ಟ್ಯಾಂಕರ್‌ಗಳು, 1000 ಮೂಟೆ ಅಕ್ಕಿ ಎಲ್ಲವನ್ನೂ ಹರಿಜನರ ಕೇರಿಗೆ ತೆಗೆದುಕೊಂಡು ಹೋದರು, ಹರಿಜನ ಮಂತ್ರಿಗಳು ಎಡಗೈನವರು ಎಡಗೈನವರಿಗೆ, ಬಲಗೈನವರು ಬಲಗೈನವರಿಗೆ ಕೊಟ್ಟರು, ಟ್ಯಾಂಕ್‌ಗಳನ್ನು ನುಗ್ಗಿಸಿದರು. ಏಕೆ ಇದೆಲ್ಲ ? ಶ್ರೀಮಾನ್ ಘೂರ್ಪಡೆಯವರ ತರಹ ಕೆಲಸಮಾಡುತ್ತಿದ್ದೆ, ಆದರೆ ನನ್ನ ಹತ್ತಿರ ದುಡ್ಡಿಲ್ಲ ಅಷ್ಟೆ. ನಾನು ಹಿಂದುಗಡೆ ಹುಡುಗರನ್ನು ಕಳುಹಿಸುವುದು, ಯಾರು ಏನು ಹೇಳುತ್ತಾರೆ ನೋಡಿಕೊಂಡು ಬನ್ನಿ ಎಂದು ಹೇಳುವುದು. ಹರಿಜನರಿಗೆ ನಾನು ಅಭಿನಂದಿಸುತ್ತೇನೆ, ಅವರು ಮಡಕೆ ತೆಗೆದುಕೊಂಡು ಬಂದು ಎರಡೂವರೆ ವರ್ಷ ಆಯಿತು, ಯಾರೂ ಒಂದು ಕೇಳಲಿಲ್ಲ ಕೊಡಲಿಲ್ಲ. ಸಿದ್ದಪ್ಪ ಸಾಯುವವರೆಗೆ ಯಾರೂ ಬಂದು ಕೇಳಲಿಲ್ಲ, ಈಗ ಬಂದರೆ ಏನು ಮಾಡುವುದಕ್ಕೆ ಆಗುತ್ತದೆ ಎಂದು ನಮ್ರವಾಗಿ ಹೇಳಿ ಕಳುಹಿಸಿದ್ದಾರೆ, ಸರ್ಕಾರ ಅಧಿಕಾರದಲ್ಲಿದ್ದಾಗ ತಾವು ಚುನಾವಣೆ ಕಾಲದಲ್ಲಿ ಕೊಟ್ಟಂಥ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡುವುದು ಬಿಟ್ಟು, ಇಡೀ ಸರ್ಕಾರ ಅಲ್ಲಿ ಹೋಗಿ ಮೊಕ್ಕಾಂ ಮಾಡಿ, ಈ ರೀತಿ ವರ್ತನೆ ಮಾಡಿದರೆ ಬಹುಶಃ ಯಾವ ರಾಜಕೀಯ ಪಕ್ಷಕ್ಕೂ ಗೌರವ ಬರುವುದಿಲ್ಲ, ಅಪಕೀರ್ತಿ ಬರುತ್ತದೆ ; ಆದುದರಿಂದ ಚುನಾವಣೆ ಸಂದರ್ಭದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಚುನಾವಣೆ ನಡೆಸುವುದಕ್ಕೆ ಕೆಲವು ನಿಯಮಗಳನ್ನು ಹಾಕಿಕೊಳ್ಳುವುದು ಒಳ್ಳೆಯದು ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತೇನೆ, ಪಾರ್ಲಿಮೆಂಟ್‌ನಲ್ಲಿ ಚುನಾವಣೆ ವೆಚ್ಚ 11-15 ಸಾವಿರ ಎಂದು ಹೇಳಿಕೊಂಡಿದ್ದಾರೆ. ಬಹುಶಃ ಇದು ಅಸಾಧ್ಯದ ಮಾತು. ಇದಕ್ಕಿಂತ ಕಟುವಾದ, ಘೋರವಾದ ಆತ್ಮವಂಚನೆ ಯಾರು ಮಾಡಲಿಕ್ಕೆ ಆಗುತ್ತದೆ ? ಈ ರೀತಿ ನಮಗೆ ಗೊತ್ತಿದ್ದರೂ ಆತ್ಮವಂಚನೆ ಮಾಡಿಕೊಳ್ಳುವ ಕೆಲಸ ಮಾಡುವುದು ಬೇಡ ಎಂದು ತಿಳಿಸಿ. ನಾನು ಒಂದು ಸಲಹೆ ಮಾಡುತ್ತೇನೆ. ಏನೆಂದರೆ, ನಿಮ್ಮ ನಿಮ್ಮ ಕ್ಯಾಂಡಿಡೇಟ್ ಹೋಗಲಿ, ನಿಮ್ಮ ಪಕ್ಷದ ಧ್ಯೇಯಧೋರಣೆಗಳನ್ನು ಹ್ಯಾಂಡ್ ಬಿಲ್ಸ್‌ನಲ್ಲಿ ಪಬ್ಲಿಶ್ ಮಾಡಿ ಕಳಿಸಿಬಿಡಿ. ಮಂತ್ರಿಗಳು ಯಾರೂ ಹೋಗಬೇಕಾಗಿಲ್ಲ. ಎಲ್ಲಾ ಪಕ್ಷಗಳಿಗೂ ನಿಷಿದ್ಧ ಮಾಡಿ, ಯಾವ ಪಕ್ಷದವರೂ ಹೋಗುವುದು ಬೇಡ. ಹಳ್ಳಿಯವರೇ

ಓಟು ಮಾಡಿ ಕೊಳ್ಳಲಿ. ಆಗ ಚುನಾವಣೆ ವೆಚ್ಚ ಕಡಿಮೆಯಾಗುತ್ತದೆ. ಹೀಗೆ ಮಾಡಿದರೆ ಅಪ್ರಾಮಾಣಿಕವಾಗಿ ಹಣ ಸಂಗ್ರಹ ಮಾಡುವುದು. ಮತದಾರರನ್ನು ಒಲಿಸಿಕೊಳ್ಳು ಅವನಿಗೆ ತಿನ್ನಿಸಿ ಕುಡಿಸಿ, ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ನಾನು ಯಾವಾಗಲೂ ಚುನಾವಣೆ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ ಕೆಲಸಮಾಡಿಕೊಂಡಿರುತ್ತೇನೆ. ಮೊನ್ನೆ ಬೈ ಎಲೆಕ್ಷನ್ ನೋಡುವುದಕ್ಕೆ ಹೋದಾಗ ಮಾತ್ರ ಈ ಪಾಪದ ಕೆಲಸವನ್ನು ನೋಡಬೇಕಾಗಿ ಬಂತು. ದಯಮಾಡಿ ಈ ರೀತಿ ಮಾಡುವುದನ್ನು ನಿಲ್ಲಿಸಬೇಕು. ಹಿಂದಿನ ಸರ್ಕಾರದವರೂ ಇದೇ ತರಹ ಮಾಡಿದ್ದಾರೆ. ನಾನು ಸಿನ್ಸಿಯರಾಗಿ ಹೇಳುತ್ತೇನೆ. ಹಿಂದೆ ಪಾರ್ಲಿಮೆಂಟ್ ಎಲೆಕ್ಷನ್ ಆಯಿತು. 27 ಸ್ಥಾನಕ್ಕೆ 27 ಸ್ಥಾನವೂ ಬಂತು. ಮೊನ್ನೆ ಬೈ ಎಲೆಕ್ಷನ್‌ನಲ್ಲಿ ಏನಾಯಿತು ಎನ್ನುವುದು ಗೊತ್ತಿದೆ. ಜನಗಳ ಮುಂದೆ ಇದು ನಡೆಯುವುದಿಲ್ಲ. ನೀವು ಮಾಡತಕ್ಕ ಕೆಲಸ ಜನತೆಗೆ ಹಿಡಿಸತಕ್ಕ ರೀತಿಯಲ್ಲಿ ಮಾಡಬೇಕೇ ಪರಂತು ಈ ರೀತಿ ಮಾಡಿದರೆ ರಿಸಲ್ಟ್ ಏನಾಯಿತು ಎಂದು ಗೊತ್ತಾಗಿದೆ. ಇವತ್ತು ಚುನಾವಣೆ ಬಗ್ಗೆ ಜನತೆಯಲ್ಲಿ ವಿಶ್ವಾಸ ಮೂಡಿಸತಕ್ಕ ರೀತಿಯಲ್ಲಿ ನಡೆದುಕೊಳ್ಳತಕ್ಕಂಥಾದ್ದು ಒಳ್ಳೆಯದು. ರಾಜಕೀಯ ಪಕ್ಷಗಳು ಯಾವುದೇ ಇರಲಿ, ಪ್ರಜಾಪ್ರಭುತ್ವದಲ್ಲಿ ಚುನಾವಣೆ ನಡೆಸತಕ್ಕ ಕಾಲದಲ್ಲಿ ಕೆಲವು ಮೌಲ್ಯಗಳನ್ನು ಇಟ್ಟುಕೊಂಡು ಮುಂದುವರೆಯುವುದು ಒಳ್ಳೆಯದು ಎನ್ನುವುದರ ಬಗ್ಗೆ ಯೋಚನೆ ಮಾಡತಕ್ಕ ಕಾಲ ಬಂದಿದೆ ಎನ್ನುವುದನ್ನು ನಾನು ಸೂಕ್ಷ್ಮವಾಗಿ ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮತದಾರರ ಪಟ್ಟಿಯನ್ನು ಪರಿಷ್ಕರಣ ಮಾಡುವುದರಲ್ಲಿ ಲೋಪ ಇದೆ. ಅದನ್ನು ತಿದ್ದುಪಡಿ ಮಾಡುವುದು ಸೂಕ್ತ. ಏಕೆಂದರೆ ಈ ರೀತಿ ತರಾತುರಿಯಿಂದ ಮಾಡಿ ಹೆಂಗಸರ ಹೆಸರೇ ಇಲ್ಲ. ಮೊನ್ನೆ ದೇವೇಗೌಡರು 1,00 ಓಟ್ ಬರುವುದನ್ನು ತಪ್ಪಿಸಿದರು ಎಂದು ಹೇಳಿದರು. ಸುಮಾರು 55 ಜನ ಅಧಿಕಾರಿಗಳನ್ನು ವರ್ಗಮಾಡಿದ್ದಾರೆ.

9–30 A.M.

ಅವರು ಏನು ಮಾಡುತ್ತಾರೆ ಎಂಬುದನ್ನು ಪ್ರಮಾಣ ಮಾಡಿ ಇಲ್ಲಿ ಹೇಳುತ್ತೇನೆ. ಚುನಾವಣೆ ನಡೆಯುವುದಕ್ಕೆ 13-14 ದಿವಸ ಮುಂಚೆ ನಾನು ಅಲ್ಲಿಗೆ ಹೋದೆ. ಅದಕ್ಕೆ ಮುಂಚೆ ಓಟರ್ ಪಟ್ಟಿಯನ್ನೂ ಕೂಡ ನಾನು ನೋಡಿರಲಿಲ್ಲ. I have no idea about it. ದೇವೇಗೌಡರು ಅಧಿಕಾರಿಗಳಿಗೆ ಹೇಳಿ ಹೆಂಗಸರ ಹೆಸರನ್ನು ಡಿಲಿಟ್ ಮಾಡಿದರು ಎಂದು ಹೇಳಿದರು. ಆದುದರಿಂದ ಅಲ್ಲಿ ತಹಸೀಲ್ದಾರ್‌ರನ್ನು ವರ್ಗ ಮಾಡಿದ್ದೀರಿ, ಬಿ.ಡಿ.ಒ. ಅವರನ್ನು ಅಸಿಸ್ಟೆಂಟ್ ಇಂಜಿನಿಯರ್ ಅವರನ್ನು, 1ನೇ ದರ್ಜೆ ಗುಮಾಸ್ತರನ್ನು, 4ನೇ ದರ್ಜೆ ಗುಮಾಸ್ತರನ್ನು ಎಲ್ಲರನ್ನೂ ವರ್ಗಮಾಡಿದ್ದೀರಿ. ಅವರು ಏನು ಮಾಡಿದ್ದರು? ತಾವು ದಯಮಾಡಿ ಈ ವಿಷಯದಲ್ಲಿ ಆತ್ಮವಂಚನೆ ಮಾಡಿಕೊಳ್ಳದೆ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಬೇಕಾದರೆ ಜನರಲ್ ಟ್ರಾನ್ಸ್‌ಫರ್ ಮಾಡಿ. ನಾನು ಬೇಡ ಎನ್ನುವುದಿಲ್ಲ. ಚುನಾವಣೆ ಆದ ಒಂದು ತಿಂಗಳಿಗೆ ಎಲ್ಲರನ್ನೂ ಅಲ್ಲಿಂದ ವರ್ಗಮಾಡಿದ್ದೀರಿ. ಇದರಿಂದ ತಮಗೆ ಏನು ಲಾಭವಾಗುತ್ತದೆ? ಬಹುಶಃ ತಮಗೆ ಅಧಿಕಾರ ಇದೆ ಎಂದು ಈ ರೀತಿ ನಡೆದುಕೊಳ್ಳಬಹುದು. ಆದರೆ ಅದಕ್ಕೆ ಬಹಳ ಕಾಲ ಬೆಲೆ ಸಿಕ್ಕುವುದಿಲ್ಲ. ಜನತೆ ಕೂಡ ಎಚ್ಚೆತ್ತುಕೊಳ್ಳುತ್ತಾರೆ. ಆದರೆ ಈ ವರ್ಗಾವಣೆ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಯಾವ ನಿಯಮಗಳೂ ಇಲ್ಲದೆ ಅವರನ್ನು ಹೇಗೆ ವರ್ಗ ಮಾಡಿದಿರಿ?

ಮಾನ್ಯ ಸಭಾಧ್ಯಕ್ಷಿಣಿಯವರೆ, ಇನ್ನು ಡಿಮ್ಯಾಂಡ್ ನಂಬರ್ 2ರ ಬಗ್ಗೆ ಹೇಳುವುದಾದರೆ, ನಮ್ಮ ಮಂತ್ರಿ ಮಂಡಲ ಎಕ್ಸ್‌ಟೆನ್‌ಷನ್ ಆಗಿದೆ. ಖರ್ಚು ಕೂಡ ಸ್ವಲ್ಪಮಟ್ಟಿಗೆ ಹೆಚ್ಚಾಗುತ್ತದೆ ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ತಾವು ಹೊಸದಾಗಿ 22 ಕಾರುಗಳನ್ನು ಕೊಳ್ಳಬೇಕೆಂದು ನಿರ್ಣಯ ಮಾಡಿದ್ದೀರಿ. ಆದರೆ ಹಿಂದೆ ಇದ್ದಂಥ ಕಾರುಗಳು ಏನಾಗಿವೆ? ಹೊಸದಾಗಿ 22 ಕಾರುಗಳನ್ನು ಕೊಳ್ಳಬೇಕೆಂದು ತರಾತುರಿಯಿಂದ ನಿರ್ಣಯವನ್ನು ಮಾಡಬೇಕಾದ ಅವಶ್ಯಕತೆಯಾದರೂ ಏನಿತ್ತು? ಒಮ್ಮೆ ತಮ್ಮ ಜೊತೆಯಲ್ಲಿ ನಾನು ಪ್ರವಾಸ ಮಾಡಿದಾಗ ಯಾರೋ ಒಬ್ಬ ಡ್ರೈವರ್ ವರ್ಕ್‌ಷಾಪ್‌ನಿಂದ ಹಳೆಯ ಕಾರನ್ನು ತಂದಿದ್ದುದು ತಮಗೂ ನೆನಪಿರಬಹುದು. ಮಂತ್ರಿಯ ಕೆಲಸ ಬಂದಕೂಡಲೇ ಅವರಿಗೆ ಹಿಂದಕ್ಕೆ ಒರಗಿಕೊಳ್ಳಲು ದಿಂಬು ಬೇಕಾಗುತ್ತದೆ. ನಾನು ಹೇಳುತ್ತೇನೆ, ಅದೂ ಕೂಡ ಬೇಕಾಗಿಲ್ಲ. ಮನುಷ್ಯನಲ್ಲಿ ಸರಳತೆ ಇರಬೇಕು. ನೀವು ಸರ್ಕಾರದ ಕೆಲಸ ಮಾಡುವುದಕ್ಕೆ ಇದು ಹಿಂದಿನ ಸರ್ಕಾರದವರು ನೇಮಕ ಮಾಡಿದ್ದು ಆ ಸ್ಥಾನಕ್ಕೆ ಈಗ ನಾವು ನೇಮಕ ಮಾಡುತ್ತಿದ್ದೇವೆಂದು ನೀವು ಹೇಳಬಹುದು. ಅನಾವಶ್ಯಕವಾಗಿ ಭರ್ತಿ ಮಾಡುವುದನ್ನು ಬಿಡಬಹುದಾಗಿತ್ತು ಎಂದು ಹೇಳಬಯಸುತ್ತೇನೆ. ಈಗ ಈ ಹೆಚ್ಚಿನ ವೆಚ್ಚವನ್ನು ತುಂಬಬೇಕೆಂದು ಸಭೆಯ ಮುಂದೆ ಇದನ್ನು ತಂದಿದ್ದೀರಿ. ಅದನ್ನು ಕಡಿಮೆ ಮಾಡುವ ಸಾಧ್ಯತೆ ಇದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ಮತ್ತೊಂದು ವಿಷಯ ಹೇಳಬೇಕೆಂದರೆ, ಪೋಲಿಸ್ ಡಿಪಾರ್ಟ್‌ಮೆಂಟ್‌ನಲ್ಲಿ ತಾವು ಕೆಲವು ಎಕ್ಸ್‌ಪೆಂಡಿಚರ್‌ಗಳನ್ನು ಹೊಸದಾಗಿ ಮಾಡಿದ್ದೀರಿ. ಅದು The Explanatory Note to Demand No. 15 says as follows :

Item Nos. 1 and 2 :

"Additional requirement is due to purchase of sanctioned vehicles and to meet the repair charges of some of the existing vehicles.

Item No. 3 :

"Increase is due to payment of the cost of Arms and Ammunititions purchased from the Ordinance Factory as also for purchase of new equipments......"

ಇದಕ್ಕೆ 58 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಇಷ್ಟು ತರಾತುರಿಯಿಂದ ಇದನ್ನು ಪ್ರೊವೈಡ್ ಮಾಡುವುದು ಸರಿಯಲ್ಲ. ಮಾಡಬೇಕಾದ ಅವಶ್ಯಕತೆಯೂ ಇಲ್ಲ. ಹೇಮಾವತಿಗಾಗಲಿ, ಹಾರಂಗಿ ಯೋಜನೆಗಾಗಲಿ, ಅಥವಾ ಕಾಳಿ ನದಿ ಯೋಜನೆಗಾಗಲಿ ಈ ದುಡ್ಡನ್ನು ಕೊಡುವುದಾದರೆ ಒಪ್ಪಿ ಕೊಳ್ಳುತ್ತೇನೆ. ಆದರಲ್ಲೂ ಸಪ್ಲಿಮೆಂಟರಿ ಡಿಮ್ಯಾಂಡ್ ಮುಖಾಂತರ ಈ ಸಭೆಗೆ ತಂದು ಸಭೆಯ ಒಪ್ಪಿಗೆಯನ್ನು ಪಡೆಯುವ ಅವಶ್ಯಕತೆ ಇರಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡು ತ್ತೇನೆ. ಡಿಮ್ಯಾಂಡ್ ನಂಬರ್ 12 ರಲ್ಲಿ 8 ಲಕ್ಷ 80 ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ. ಒಂದು ಕಡೆ ಸತ್ಯಾಗ್ರಹಕ್ಕೆ ಕೂತಿದ್ದಾರೆ. ನಾವು ಇದೇ ರೀತಿ ಎಷ್ಟು ಪೇ ಕಮಿಷನ್‌ಗಳನ್ನು ಮಾಡುತ್ತಾ ಹೋಗಬೇಕು. ಇದಕ್ಕೆ ನಾವು ಒಂದು ಅಂತಿಮ ನಿರ್ಣಯವನ್ನು ಮಾಡದೇ ಹೋದರೆ ನಾವು ತೆರಿಗೆ ಹಾಕುವುದು, ಇವರಿಗೆ ಸಂಬಳ ಕೊಡುವುದು ಇದು ಎರಡೇ ಕೆಲಸವಾಗುತ್ತದೆ. ಇವತ್ತಿನ ದಿವಸ ನೌಕರರು ಜೀವನ ನಡೆಸುವುದಕ್ಕೆ ಕಷ್ಟವಾಗಿದೆ. ಇವತ್ತು ಸರ್ಕಾರ. ಕೆಲವು ನಿಯಮಗಳಿಗೆ ಕಟ್ಟುಬಿದ್ದಿದೆ. ಅವರ ಜೀವನಾಂಶ 8ಕ್ಕೆ ಏರಿದೆ. ಒಂದು ವರ್ಷಕ್ಕೆ ಸಾಕಷ್ಟು ಸೌಕರ್ಯಗಳಿರಬೇಕು. ಮಂತ್ರಿಯಾದವರು ಸೈಕಲ್ ಮೇಲೆ ಓಡಾಡಿ ಎಂದು ಹೇಳುವುದಿಲ್ಲ. ಮುರಿದ ಮನೆಯಲ್ಲಿ ಅಥವಾ ಜೋಪಡಿಯಲ್ಲಿ ನೀವು ವಾಸಮಾಡಿ ಎಂದು ಹೇಳುವುದಿಲ್ಲ. You require all amenities. I am prepared to tell from this side. ಇನ್ನೂ ಬೇಕಾದರೆ 500 ರೂಪಾಯಿ ನಿಮ್ಮ ಸಂಬಳ ಜಾಸ್ತಿ ಮಾಡಿಕೊಳ್ಳಿ, ಯೋಗ್ಯ ರೀತಿಯಲ್ಲಿ ಕೆಲಸ ಮಾಡಿ, ಚಿಲ್ಲರೆ ಕೆಲಸಕ್ಕೆ ಕೈಹಾಕಬೇಡಿ ಎಂದು ಹೇಳುತ್ತೇನೆ. We cannot hoodwink the people. ನೀವು ಚಿಲ್ಲರೆ ಕೆಲಸಕ್ಕೆ ಕೈ ಹಾಕಿದರೆ ಜನಗಳು ಒಪ್ಪುವುದಿಲ್ಲ. I want the Minister should behave like a Minister. I want that reputation should be maintained. ಸಿಕ್ಕಾಪಟ್ಟೆ ಖರ್ಚು ಮಾಡುವುದಕ್ಕೆ ನಾವು ಒಪ್ಪಿಕೊಳ್ಳುವುದಿಲ್ಲ. ನಿಮಗೆ ಸಾಕಷ್ಟು ಕಾರುಗಳು ಈಗ ಇವೆ. ಅವುಗಳನ್ನು ಮೈನ್‌ಟೇನ್ ಮಾಡಿಕೊಳ್ಳುವ ಬಗ್ಗೆ ಸಾಕಷ್ಟು ಹಣವನ್ನೂ ಖರ್ಚು ಮಾಡಿದ್ದೇವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಮುಂದೆ ಇಟ್ಟು ರಿಪೇರಿ ಖರ್ಚಿಗಾಗಿ ಸಾಕಷ್ಟು ಹಣವನ್ನು ವೆಚ್ಚ ಮಾಡಿದ್ದೀರಿ. ಇಂಥ ಒಂದು ವೆಚ್ಚವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಬಹುದಾಗಿತ್ತು ಎಂದು ನನ್ನ ಅಭಿಪ್ರಾಯವನ್ನು ತಿಳಿಯಬಯಸುತ್ತೇನೆ.

ಇನ್ನು ಪಿ. ಎಸ್. ಸಿ. ಬಗ್ಗೆ ಒಂದು ಮಾತು ಹೇಳುವುದಾದರೆ, ತಾವು ಈಗ ಏನು ಒಬ್ಬ ಪಿ.ಎಸ್.ಸಿ.ಗೆ ಛೇರ್ಮನ್‌ನ್ನು ನೇಮಕ ಮಾಡಿದ್ದೀರಿ . ಆ ಬಗ್ಗೆ ನಾನು ನನ್ನ ಸಮಾಧಾನವನ್ನು ವ್ಯಕ್ತಪಡಿಸುತ್ತೇನೆ. A man of integrity and a man of character has now been installed as Chairman of the P.S.C. but I am not going to give the same certificate to the other members nor I do want to name the Members. ಯಾರು ಯಾರು ಹೇಗೆ ಹೇಗೆ ಇದ್ದಾರೆ ಎಂಬುದು ಆ ಕಡೆ ಕೂತಿರುವವರಿಗೂ ಗೊತ್ತಿದೆ, ಈ ಕಡೆ ಕೂತಿರುವವರಿಗೂ ಗೊತ್ತಿದೆ. ಆ ವ್ಯಕ್ತಿಯ ತೇಜೋವಧೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಪಿ.ಎಸ್.ಸಿ. ಛೇರ್ಮನ್‌ರನ್ನು ಯೋಗ್ಯರಾದವರನ್ನೆ ಮಾಡಿದ್ದೀರಿ ಎಂದು ಹೇಳುವ ಕಾಲದಲ್ಲಿ ಆ ಸಂಖ್ಯೆಯನ್ನು ಕಡಿಮೆ ಮಾಡಬಹುದಾಗಿತ್ತು. 7 ಜನದ ಅವಶ್ಯಕತೆ ಇರಲಿಲ್ಲ. ಕೊನೇ ಪಕ್ಷ 5 ಆಗಿದ್ದರೆ ಸಾಕಾಗಿತ್ತು. ಇವತ್ತು Departmental recruitment

Committees Veto ಸಾಕಷ್ಟು ಮಾಡಿದ್ದಾರೆ. ಅವರಿಗೆ ವರ್ಕ್ ಲೋಡ್ ಕಡಿಮೆಯಾಗಿದೆ. ಹೋಲ್‌ಸೇಲ್ ಪ್ರೈಸ್ 27-30 ಪರ್ಸೆಂಟ್‌ವರೆಗೂ ಜಾಸ್ತಿಯಾಗಿದೆ. ರೀಟೈಲ್ ಪ್ರೈಸೆಸ್ 40-70 ಪರ್ಸೆಂಟ್‌ವರೆಗೂ ಕೆಲವು ಐಟಂಸ್‌ಗೆ ಹೋಗಿದೆ. ಇದರಿಂದಾಗಿ ಅವರು ಜೀವನ ಮಾಡುವುದು ಕಷ್ಟವಾಗಿದೆ. ಇವತ್ತಿನ ದಿವಸ; ಒಂದು ತಿಂಗಳಿಗೆ ಕೇವಲ 40 ರೂಪಾಯಿ ಕೂಡ ಸಂಪಾದನೆ ಇಲ್ಲದೆ ಎರಡು ದಿವಸಕ್ಕೆ ಒಂದು ಊಟವನ್ನು ಮಾಡುತ್ತಿರತಕ್ಕ ಜನರಿದ್ದಾರೆ. ಹೋಟೆಲ್ ನಲ್ಲಿ ತಿಂಡಿ ತಿಂದು ಎಲೆಯನ್ನು ಬಿಸಾಡಿದರೆ ಅದನ್ನು ನಾಯಿಗಿಂತ ಕಡೆಯಾಗಿ ಆ ಎಲೆಯಲ್ಲಿ ತಿನ್ನುವಂಥಾದ್ದನ್ನು ನೋಡಿದ್ದೇವೆ. ಆದುದರಿಂದ ಯಾವ ತರಹದ ಸರ್ಕಾರವೇ ಬಂದರೂ ಕೂಡ ಜನರಿಗೆ ಎರಡು ಹೊತ್ತು ಊಟವನ್ನು ಕೊಡುವುದಕ್ಕೆ ತಯಾರು ಇಲ್ಲದಿದ್ದರೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಎಷ್ಟು ದಿವಸ ರಾಜ್ಯವಾಳುವುದಕ್ಕೆ ಆಗುತ್ತದೆ ಸ್ವಾಮಿ ? ಪರಿಸ್ಥಿತಿ ಹೀಗಿದೆ. ಒಂದು ಸಾರಿ ಡಿಯರ್‌ನೆಸ್ ಅಲೋಯನ್ಸ್‌ನ್ನು ಹೆಚ್ಚು ಮಾಡಿದಾಕ್ಷಣಕ್ಕೇ 6 ಕೋಟಿ ರೂಪಾಯಿಯಾಗುತ್ತದೆಂದು ಹೇಳುತ್ತೀರಿ. ಆದರೆ ಅದು ಏನು ಎಂಬುದು ಗೊತ್ತಿಲ್ಲ. ಕೇಂದ್ರ ಸರ್ಕಾರದಿಂದ 50 ಕೋಟಿ ರೂಪಾಯಿ ಬರುತ್ತದೆಂದು ಹೇಳುತ್ತೀರಿ. ಆದರೆ ಅವರಿಗೆ 8-9 ರೂಪಾಯಿ ಡಿಯರ್‌ನೆಸ್ ಅಲೋಯನ್ಸ್ ಕೊಡಬೇಕಾದರೂ ಕೂಡ ಹೋರಾಟ ನಡೆಯುತ್ತದೆ.

ಇಂತಹ ಗೊಂದಲದ ಪರಿಸ್ಥಿತಿಯಲ್ಲಿ ಯಾವುದೇ ರಿಸೋರ್ಸಸ್ ಹೆಚ್ಚು ಮಾಡಿಕೊಂಡರೂ ರಿಸೋರ್ಸಸ್ ಮೊಬಲೈಸೇಷನ್ ಏನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಒಂದು ಬಾಬಿನಲ್ಲಿ ಹಿಡಿತ ಮಾಡದೆ ಅಭಿವೃದ್ಧಿ ಕಾರ್ಯವನ್ನು ಮಾಡುವುದಕ್ಕಾಗುವುದಿಲ್ಲ. ಅವರಿಗೂ ಕೂಡ ಈ ವೇದಿಕೆ ಮುಖೇನ ಒಂದು ಮಾತನ್ನು ಹೇಳುತ್ತೇನೆ. ಸರ್ಕಾರದವರು ಅವರ ಕಷ್ಟಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮಷ್ಟೇ ಅವರಿಗೆ ರಾಷ್ಟ್ರಪ್ರೇಮ ಇದೆ. ಸಮಾಜದಲ್ಲಿರುವ ದುರ್ಬಲ ಜನತೆಯ ಬಗ್ಗೆ ಪ್ರೇಮ ಇದೆ. ಅವರೂ ಕೂಡ ಅಭಿವೃದ್ಧಿ ಕಾರ್ಯಗಳ ಬಗ್ಗೆ ಗಮನ ಇಟ್ಟುಕೊಳ್ಳುತ್ತಾರೆ. ಸರ್ಕಾರದವರು ಅವರ ಕಷ್ಟಗಳನ್ನು ಬಿಡಿಸತಕ್ಕದ್ದರಲ್ಲಿ ಬೆಲೆಗಳನ್ನು ಹತೋಟಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಅವರ ಈ ಒಂದು ಪರಿಸ್ಥಿತಿಯನ್ನು ಉಪೇಕ್ಷೆ ಮಾಡಬಾರದು. ಅವರಿಗೆ ಇರತಕ್ಕ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಸಮಸ್ಯೆಗಳನ್ನು ಬಿಡಿಸತಕ್ಕ ಕಡೆ ಪ್ರಯತ್ನ ಮಾಡಬೇಕು. ಏಕೆಂದರೆ ಇದು ಜಟಿಲವಾದ ಸಮಸ್ಯೆಯಾಗಿದೆ. ಕೇಂದ್ರ ಸರ್ಕಾರದವರಿಗೆ ಇದರ ಬಗ್ಗೆ ಇನ್ನೂ ಜ್ಞಾನೋದಯವಾಗಿಲ್ಲವೆಂದು ನನಗೆ ಮನೋ ವ್ಯಥೆಯಾಗಿದೆ. ಕೇಂದ್ರ ಸರ್ಕಾರದ ನೌಕರರಿಗೆ ಸೌಲಭ್ಯಗಳನ್ನು ಕೊಡುವರೀತಿಯಲ್ಲಿ ರಾಜ್ಯ ಸರ್ಕಾರ ಪದೇ ಪದೇ ಯಾವುದೇ ನಿರ್ಣಯ ತೆಗೆದುಕೊಳ್ಳಬೇಕಾದರು ರಾಜ್ಯ ಸರ್ಕಾರದ ನೌಕರರನ್ನು ಗಮನದಲ್ಲಿಟ್ಟುಕೊಂಡು, ರಾಜ್ಯಸರ್ಕಾರದೊಡನೆ ಸಮಾಲೋಚನೆ ಮಾಡಿ ನಿರ್ಣಯವನ್ನು ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರ ಇದೇ ಧೋರಣೆಯನ್ನು ಮುಂದುವರಿಸಿಕೊಂಡು ಬರುತ್ತಿದೆ. There is no national policy as such. ಇದು ಏನಾಗುತ್ತದೆ ಎಂದರೆ ರಾಜ್ಯ ಸರ್ಕಾರಗಳಿಗೆ ಬಹಳ ಇಕ್ಕಟ್ಟು ಆಗುತ್ತದೆ. ಇವತ್ತು ಕೂಡ ಹೇಳುತ್ತೇನೆ ಕೇಂದ್ರ ಸರ್ಕಾರ must evolve a national policy. ಅದನ್ನು ಮಾಡದೇ ಹೋದರೆ ಕಲೆಕ್ಷನ್ ಮತ್ತು ಡಿಸ್ಟ್ರಿಬ್ಯೂಷನ್ ಏಜೆನ್ಸೀಸ್ ಇದ್ದ ಹಾಗೆ, ತೆರಿಗೆ ಕಲೆಕ್ಟ್ ಮಾಡುವುದು, ಅದನ್ನು ತಂದು ಸೇವಾ ನಿಯಮದ ಸಿಬ್ಬಂದಿ ಏನು ಇದ್ದಾರೆ ಅವರಿಗೆ ಹಂಚಿಕೆ ಮಾಡುವುದು, ಈ ಎರಡು ಕೆಲಸ ಮಾತ್ರ ಮಾಡಿದಂತಾಗುತ್ತದೆ. ಇವತ್ತು ಕೂಡ ನಾನು ಕೇಂದ್ರ ಸರ್ಕಾರಕ್ಕೆ ಸೂಚನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯ ಸರ್ಕಾರಗಳಿಗೆ ಇಕ್ಕಟ್ಟನ್ನು ಉಂಟು ಮಾಡತಕ್ಕ ರೀತಿಯಲ್ಲಿ ಅವರು ವರ್ತಿಸತಕ್ಕದ್ದು ಯೋಗ್ಯವಲ್ಲ ಎಂದು ತಿಳಿಸುತ್ತೇನೆ. ರಾಜ್ಯ ಸರ್ಕಾರದ ನೌಕರರು ಏನಿದ್ದಾರೆ ಅವರ ಬಗ್ಗೆ ಒಂದು ಸೂಚನೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಬಹಳ ಕಡಿಮೆ ವರ್ಕ್ ಚಾರ್ಜಸ್ ಅಂದರೆ 100 ರಿಂದ 300 ರೂಪಾಯಿ ಸಂಬಳ ತೆಗೆದುಕೊಳ್ಳುವವರ ಬಗ್ಗೆ ಸ್ವಲ್ಪ ತಮ್ಮ ಕೈಯನ್ನು ಹಿಡಿಯಬೇಡಿ. ಅವರ ಸಂಬಳವನ್ನು ಹೆಚ್ಚು ಮಾಡಿದರೆ ಅವರಿಗೆ ಗಂಜಿ ಕುಡಿಯುವುದಕ್ಕೆ ಅವಕಾಶವಾಗುತ್ತದೆ. ಕೆಲವು 1200 ರೂಪಾಯಿನಿಂದ 2000 ರೂಪಾಯಿವರೆಗೆ ಸಂಬಳ ಬರುವವರೂ ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ. 1½ ಸಾವಿರ ಸಂಬಳ ತೆಗೆಯುವವರು ಬಿ.ಟಿ.ಎಸ್. ಬಸ್‌ನಲ್ಲಿ ಬರುತ್ತಾರೆ. ನಾನು ಎಷ್ಟೋಸಾರಿ ನೋಡಿದ್ದೇನೆ. ಅವರು ಜಯನಗರದಿಂದ ಕಾರ್ ತೆಗೆದುಕೊಂಡು ಬರಬೇಕಾದರೆ 20 ರೂಪಾಯಿ ಹೋಗುತ್ತದೆ. ಅವನು ಕ್ಲಾಸ್ I ಆಫೀಸರ್ ಆದರೂ ಎಲ್ಲಿಂದ ತರುತ್ತಾನೆ?

ಶ್ರೀ ಟಿ. ಆರ್. ಶಾಮಣ್ಣ.—ಫೈನಾನ್ಸ್ ಸೆಕ್ರೆಟರಿಯವರು ದಿನಾ ನಡೆದುಕೊಂಡು ಬರುತ್ತಾರೆ.

Sri H. D. DEVE GOWDA.—I know it. I did not want to mention the name of the individual Officer. There are several honest Class I and II Officers. ಅವರು ಬಿ.ಟಿ.ಎಸ್. ಬಸ್‌ನಲ್ಲಿ ಓಡಾಡುತ್ತಾರೆ. ಇಂತಹ ಪರಿಸ್ಥಿತಿ ಆಗಿದೆ. ಇವತ್ತು ಅವರು ಧರಣಿ ಕೂತಿದ್ದಾರೆ. ಸರ್ಕಾರ ಅವರನ್ನು ಕರೆಸಿ ನಿಮ್ಮ ಕಷ್ಟವನ್ನು ಅವರ ಮುಂದೆ ಹೇಳಿ. ರಾಜ್ಯದ ಹಿತಾಸಕ್ತಿ ಬಗ್ಗೆ ಅವರಿಗೂ ಕನಿಕರ, ಕರುಣೆ ಎನ್ನುವುದು ಇದೆ. ಅವರು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದಾರೆ. ಅವರನ್ನು ಕರೆಸಿ ಅವರ ಜೊತೆಯಲ್ಲಿ ಮಾತನಾಡಿ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸರ್ಕಾರ ಮುಂದೆ ಹೋಗಬೇಕೆಂದು ಈ ಸಂದರ್ಭದಲ್ಲಿ ನಾನು ಸೂಚನೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಘೋರ್ಪಡೆ ಯವರು ಬಹಳ ಜಾಣ್ಮೆಯಿಂದ ವರ್ತಿಸುತ್ತಾರೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರ ಜಾಣ್ಮೆ ಒಂದೊಂದು ಸಾರಿ ಪಿ.ಡಬ್ಲ್ಯು.ಡಿ. ಕಡೆ ಬಂದಾಗ ಒಂದು ರೀತಿಯ ಮಾತ್ಸರ್ಯ ಮನೋ ಭಾವನೆ ಇದೆಯೋ ಎಂಬಂತೆ ತೋರಿಬರುತ್ತದೆ. ಒಂದು ಮಾತನ್ನು ಮಾನ್ಯ ಘೋರ್ಪಡೆಯವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ, The Explanatory Note given under Demand No. 19—Public Works says as follows :—

> "Government have taken up construction of additional accommodation to the Legislators' Home at an estimated cost of Rs. 67.50 lakhs. The first stage of construction estimated to cost Rs. 22,00 lakhs is in progrees. No provision has been made for this item of work. The expenditure constitutes "New Service." A token sum of Rs. 1000 is included as the entire amount can be found by re-appropriation of savings."

ಸ್ವಾಮಿ, ಪಿ.ಡಬ್ಲ್ಯು.ಡಿ. ರೀ ಅಪ್ರೋಪ್ರಿಯೇಷನ್ ಬೈವೇ ಆಫ್ ಸೇವಿಂಗ್ಸ್ ತೆಗೆದುಕೊಂಡರೆ ಬೇರೆ ವರ್ಕ್‌ಗಳನ್ನು ನಿಲ್ಲಿಸಬೇಕು. ಬಿಲ್ಡಿಂಗ್‌ನಲ್ಲೋ ರೋಡ್‌ನಲ್ಲೋ ಯಾವುದಾದರೂ ಎಕ್ಸ್ ಪೆಂಡಿಚರ್ ಕಟ್‌ಡೌನ್ ಮಾಡಿ ಇದಕ್ಕೆ ರೀ ಅಪ್ರೋಪ್ರಿಯೇಟ್ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಪೋಲೀಸ್ ಇಲಾಖೆಯಲ್ಲಿ 58 ಲಕ್ಷ ಕೊಡುವಾಗ ವೆಹಿಕಲ್ ಇಮ್ಯುನಿಷನ್ ಕೇಳಲಿಕ್ಕೆ ಇಲ್ಲಿ ಬಂದಾಗ ರೀ ಅಪ್ರೋಪ್ರಿಯೇಟ್ ಮಾಡಿಕೊಳ್ಳುತ್ತಾರೆಂದು ಹೇಳಿದ್ದೀರಿ. ಏತಕ್ಕೆಂದರೆ ಪಿ.ಡಬ್ಲ್ಯು.ಡಿ. ಇಲಾಖೆಯ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕ ಮಾತು ಬೇರೆ. ಇಲ್ಲಿ ಆಗತಕ್ಕ ಕೆಲಸ ಅಂದರೆ ಅಭಿವೃದ್ಧಿ ಕಾರ್ಯಕ್ಕೆ ಸಂಬಂಧಪಟ್ಟ ಕೆಲಸಗಳು ಆಗಬೇಕು. ಎಕ್ಸ್‌ಪೆಂಡಿಚರ್ ಮಾಡುವಾಗ ಹಿಡಿತ ಇರಬೇಕೆಂದು ಎಷ್ಟೇ ಹೊರಗಡೆಯಿಂದ ಕ್ರಿಟಿಸೈಸ್ ಮಾಡಿ ಹೇಳಿದರೂ ರಾಜ್ಯದ ಅಭಿವೃದ್ಧಿ ಕಾರ್ಯ ಈ ಇಲಾಖೆಯಿಂದಲೇ ಆಗಬೇಕು. ಅದು ಇಲ್ಲದಿದ್ದರೆ ಇನ್ನ ಯಾವ ಇಲಾಖೆಯಿಂದಲೂ ಮಾಡುವುದಕ್ಕೆ ಸಾಧ್ಯವಿಲ್ಲ. ಸೇವಿಂಗ್ಸ್ ಮಾಡಿ ರೀ ಅಪ್ರೋಪ್ರಿ ಯೇಟ್ ಮಾಡಬೇಕೆಂಬ ವಾದವನ್ನು ಮುಂದೊಡುವುದಾದರೆ ಅಷ್ಟು ಡೆವೆಲಪ್‌ಮೆಂಟ್ ಕಡಿಮೆ ಯಾಗುತ್ತದೆ. ಸೇವಿಂಗ್ಸ್ ಮಾಡುವುದಕ್ಕೆ ಅವಕಾಶ ಕೊಡಕೂಡದು. ಒರಿಜನಲ್ ಬಜೆಟ್‌ನಲ್ಲಿ ಏನು ಸ್ಯಾಂಕ್ಷನ್ ಕೊಟ್ಟಿದ್ದಾರೆ ಆ ಒಂದು ಕೆಲಸ ನಡೆಯಬೇಕು. ಯಾವುದನ್ನೋ ಕಿತ್ತು ಯಾವು ದನ್ನೋ ಮಾಡಿಕೊಳ್ಳುತ್ತೇವೆಂದು ಹೇಳುವುದು ಯೋಗ್ಯವಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಭಾಧ್ಯಕ್ಷಿಣಿಯವರೆ ಹೀಗೆ ಹೇಳುತ್ತಾ ಹೋದರೆ ಬಹಳ ವಿಷಯಗಳು ಇವೆ. ನನಗೆ ಗೊತ್ತಿದೆ ನಾನು ಅಗ್ರಿಕಲ್ಚರಲ್ ಡಿಮ್ಯಾಂಡ್ ಮೇಲೆ ಮಾತನಾಡಬೇಕೆಂಬ ಆಸೆ ಇದೆ. ಏಕೆಂದರೆ ನಾನು ವ್ಯವಸಾಯ ಕುಟುಂಬದಲ್ಲಿ ಹುಟ್ಟಿ ಬಂದಿರತಕ್ಕವನು. ಇನ್ನೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಆದರೆ ಒಂದು ಗಂಟೆಗೆ ರಿಪ್ಲೈ ಶುರು ಆಗುವುದಕ್ಕೆ ಮುಂಚೆ ಜೂನಿಯರ್ ಇಂಜಿನಿಯರ್ಸ್ ಬಗ್ಗೆ ಬೇಸ್ಡ್ ಆನ್ ದಿ ಅಗ್ರಿಕಲ್ಚರ್ ಡಿಮ್ಯಾಂಡ್ ಮೇಲೆ ಕೆಲವರು ಮಾತನಾಡತಕ್ಕ ಸನ್ನಿವೇಶ ಇರುವುದರಿಂದ ನಾನು ಹೆಚ್ಚು ಸಮಯವನ್ನು ತೆಗೆದು ಕೊಳ್ಳುವುದಿಲ್ಲ. ಹಲವಾರು ಎಕ್ಸ್‌ಪೆಂಡಿಚರ್ ಏನು ಇವೆ ಅವನ್ನು ಮಿನಿಮೈಸ್ ಮಾಡಬೇಕಾಗಿತ್ತು. ಕೆಲವು ಅನ್‌ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್ ಇದೆಯೆಂದು ಹೇಳಿದ್ದೀರಿ. ನಾವು ಬಹಳ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಖರ್ಚು ವೆಚ್ಚಗಳ ಮೇಲೆ ಹತೋಟಿ ಬಿಟ್ಟು ಹೋಗದಂತೆ ನೋಡಿ ಕೊಳ್ಳುತ್ತೇವೆಂದು ಹೇಳಿದ್ದೀರಿ. ಇನ್ನೂ ಅನೇಕ ಐಟಂಗಳು ಇವೆ ಒಂದೊಂದು ಡಿಮ್ಯಾಂಡ್ ಮೇಲೆ ಇಲ್ಲಿ ಕೂತು ಚರ್ಚೆ ಮಾಡುವುದಕ್ಕೆ ಹೋದರೆ ಒಂದು ಗಂಟೆ ಮಾತನಾಡಬೇಕಾಗುತ್ತದೆ. ಹಲವಾರು ಡಿಮ್ಯಾಂಡ್ಸ್‌ಗಳ ಬಗ್ಗೆ ಅನ್‌ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್ ಇದೆ ಎಂದು ಕಾಣುತ್ತದೆ.

ಎಕ್ಸ್‌ಪೆಂಡಿಚರ್ ಆನ್ ಮೇಜರ್ ಇರಿಗೇಷನ್ ಎಂದು ಏನು ಒಂದು ಐಟೆಮ್ ಇದೆ ಆ ಬಗ್ಗೆ ಹೇಳುವುದಾದರೆ ಅವೂ ಸಹ ಅನ್‌ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇವತ್ತು ಕೊನೆಯದಾಗಿ ಒಂದು ಮಾತನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಏನೆಂದರೆ ಮಂತ್ರಿಗಳ ಕೆಲಸ ಗುಮಾಸ್ತರ ಕೆಲಸ ಆಗಬಾರದು. ಮಂತ್ರಿಗಳ ಕೆಲಸವನ್ನು ಮಂತ್ರಿಗಳಾಗಿಯೇ ನಿರ್ವಹಣೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಇಂತಹ ಪರಿಸ್ಥಿತಿ ಉದ್ಭವವಾಗಿದೆ. ಮೊನ್ನೆ ಆ ಮನೆಯಲ್ಲಿ ಮುಖ್ಯಮಂತ್ರಿಗಳು ತೆಗೆದುಕೊಂಡಂತಹ ಧೋರಣೆಯ ಫಲ ಇದು. ಪುನಃ ದೇವೇಗೌಡರು ನಿರ್ಮಲ ಇಂಜಿನಿಯರಿಂಗ್ ಕಂಪನಿ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಾರೆ ಎಂದು ಹೇಳಬೇಡಿ. ಅದರ ಬಗ್ಗೆ ಪ್ರತ್ಯೇಕ ಚರ್ಚೆಗೆ ಅವಕಾಶ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದು ಸಾಯಲಿಲ್ಲ.

ಶ್ರೀ ಎಚ್.ಡಿ.ದೇವೇಗೌಡ.—ಅದು ಅಷ್ಟು ಸುಲಭವಾಗಿ ಸಾಯುವುದಕ್ಕೆ ಬಿಡುವುದಿಲ್ಲ. ಇವತ್ತು ಮಂತ್ರಿಗಳ ಆರ್ಡರ್‌ಸ್‌ಗಳು ಒಬ್ಬ ಸಾಮಾನ್ಯ ಗುಮಾಸ್ತನ ನೋಟಿಂಗ್ಸ್ ತರಹ ಆದರೆ, let any Tom, Dick and Harry be there as Minister, ಇಷ್ಟು ಮಾತ್ರ ಹೇಳುತ್ತೇನೆ ಆತ್ಮಗೌರವನ್ನು ಕಳೆದುಕೊಂಡು ಆ ಜಾಗದಲ್ಲಿ ಕೂಡಬಾರದು. ಅಧಿಕಾರ ಯಾವತ್ತೂ ಶಾಶ್ವತ ಅಲ್ಲ. ಪುಟ್ಟಸ್ವಾಮಿಯವರು 10 ವರ್ಷ ಇದ್ದರು, ಇನ್ನೊಬ್ಬರು 10 ವರ್ಷ ಇದ್ದವರು ಹೋದರು ಅದು ಮುಖ್ಯವಲ್ಲ. ಆದರೆ, ಆ ಸ್ಥಾನದಲ್ಲಿ ಮಂತ್ರಿ ಘನತೆ ಗೌರವ ಮತ್ತು ಗಾಂಭೀರ್ಯ ಆ ಸ್ಥಾನಕ್ಕೆ ತುಂಬುವುದಕ್ಕೆ, ಯೋಗ್ಯತೆ ಆ ಸ್ಥಾನಕ್ಕೆ ದೊರಕಿಸುವುದಕ್ಕೆ ಸಾಧ್ಯ ಇಲ್ಲದೇ ಇದ್ದರೆ, ತಿಲಾಂಜಲಿ ಅರ್ಪಿಸಬೇಕಾಗುತ್ತದೆ. ಶಾಸಕನಾಗಿ ಕೂತುಕೊಂಡರೆ, ಬೆಲೆ ಬರುತ್ತದೆ, ಗೌರವ ಬರುತ್ತದೆ. ನಿರ್ಮಲ ಇಂಜಿನಿಯರಿಂಗ್ ಹಗರಣದ ಬಗ್ಗೆ ಚನ್ನಬಸಪ್ಪನವರು, ಸಿದ್ದವೀರಪ್ಪನವರು ಮತ್ತು ಶ್ರೀಮಾನ್ ನಗರಾಳ್‌ರವರಿಗೆ ಅಭಿನಂದನೆ ಮಾಡಿದ್ದೇನೆ. ಮೂರು ಜನ ಮೊದಲು ರಾಜಿನಾಮೆ ಕೊಟ್ಟು, ಗೌರವ ಉಳಿಸಿಕೊಂಡರೆ, ನಿಮ್ಮ ಹೆಸರು, ನಾನು ಲಘುವಾಗಿ ಹೇಳುತ್ತೇನೆಂದು ಭಾವಿಸಬೇಡಿ, ಲಘುವಾಗಿ ಯಾರಿಗೂ ಹೇಳುವುದಿಲ್ಲ, ಮೂರು ಜನ ರಾಜಿನಾಮೆ ಕೊಟ್ಟು, ಹೆಡ್ ಗುಮಾಸ್ತರ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಅವರ ಆರ್ಡರ್ ಹರಾಜು ಆಯಿತು, ಇದಕ್ಕೆ ಆ ರೀತಿ ವರ್ತನೆ ಮಾಡುವುದಕ್ಕೆ ಸಾಧ್ಯ. ಮಂತ್ರಿ ಕೆಲಸ ಹೋದರೂ ಜೀವನ ಮಾಡುತ್ತಾರೆ, ಮಂತ್ರಿ ಗೌರವ ಉಳಿಸಿಕೊಂಡರೆ ನಿಮ್ಮ ಹೆಸರನ್ನು ಕರ್ನಾಟಕದಲ್ಲಿ ಇನ್ನೂ ನಾಲ್ಕು ದಿನ ಹೇಳುತ್ತಾರೆ. ಇಲ್ಲದೇ ಹೋದರೆ ಹೊಟ್ಟೆ ಪಾಡಿಗೆ ಇರುತ್ತಾರೆ ಎಂದು ಅರ್ಥ. ಈ ಸ್ಥಾನಕ್ಕೆ ಗೌರವ ಇಲ್ಲ ಎಂದು ಪ್ರಾಸಂಗಿಕವಾಗಿ ತಿಳಿಸುತ್ತೇನೆ.

ಶ್ರೀ ಎನ್. ರಾಚಯ್ಯ.—ದೇವೇಗೌಡರೇ ಅಷ್ಟು ಗೊತ್ತಿಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ.—ಜೊಲ್ಲು ಸುರಿಸಿಕೊಂಡು ಊರು ಊರು ಸುತ್ತುತ್ತಾರೆ. ಜೊಲ್ಲು ಸುರಿಸುವ ಕೆಲಸ ಆಗಿದ್ದರೆ, ಎಂದೋ ಮಂತ್ರಿ ಆಗಬಹುದಾಗಿತ್ತು. ಅದು ಬೇಕಿಲ್ಲ ; ಬಂದರೆ ನನ್ನ ಕಾಲ ಹತ್ತಿರ ಬರಬೇಕು. ಆ ರೀತಿ ಮಂತ್ರಿ ಪದವಿ ಇಟ್ಟುಕೊಂಡು ನಾವು ಬಾಳಲಿಕ್ಕೆ ಯಾವತ್ತು ತಯಾರಿಲ್ಲ. ಒಳಗೆ ಹೋಗಿ ಕಾಲು ಹಿಡಿದುಕೊಂಡು, ಕೈ ಹಿಡಿದುಕೊಂಡು, ಸೀರೆ ಹೊದ್ದು ಇದು ಬೇಕಾಗಿಲ್ಲ. ರಾಚಯ್ಯನವರಿಗೆ ಹೇಳಲಿಲ್ಲ, ಮೂರು ಜನರ ಬಗ್ಗೆ ಅಭಿಮಾನ ಇಟ್ಟು ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸೀರೆ ಹೊದ್ದುದು ಯಾರು ?

ಶ್ರೀ ಎಚ್. ಡಿ. ದೇವೇಗೌಡ.—ಇಷ್ಟು ಮಾತನ್ನು ಹೇಳಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಎಲ್ಲಾ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಬೇರೆ ಅವಕಾಶ ಸಿಕ್ಕಬಹುದು. ಅಲ್ಲದೆ ಕಾಲಹರಣ ಮಾಡುವ ದೃಷ್ಟಿಯಿಂದ ಮಾತನಾಡುವುದಿಲ್ಲ. ಎರಡು ಮೂರು ವಿಷಯಗಳ ಬಗ್ಗೆ ಮಾತ್ರ ಮಾತನಾಡಬೇಕಾಗಿದೆ. ಡಿಮ್ಯಾಂಡುಗಳನ್ನು ಸರಿಯೇ ತಪ್ಪೇ ಎಂದು ಚರ್ಚೆ ಮಾಡಿ ಇಡಬೇಕಾಗುತ್ತದೆ. ಸರ್ಕಾರದ ಧೋರಣೆ ಮೊದಲೇ ಯೋಚನೆ ಮಾಡಬೇಕಾಗಿತ್ತು, ವಿರೋಧಪಕ್ಷದ ಧೋರಣೆ ಅದು ನಡೆದುಕೊಂಡು ಬರುತ್ತಾ ಇದೆ, ಇದು ಕಂಠಶೋಷಣೆ ಆಗಿದೆಯೇ ವಿನಹ ಬೇರೆ ಏನೂ ಆಗಿಲ್ಲ. ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬಗ್ಗೆ

ಯಾವಾಗಲೂ ಟೀಕೆ ಇದೆ. ಇದು ತರುವುದು ಸರಿಯಲ್ಲ, ಅತ್ಯಾವಶ್ಯಕ ಉದ್ದೇಶಗಳ ಬೇಡಿಕೆಗಳ ಬಗ್ಗೆ ವಿರೋಧ ಮಾಡುವುದು ಸರಿಯಲ್ಲ ಅದು ಒಪ್ಪಿಕೊಳ್ಳಬೇಕಾಗುತ್ತದೆ. ಕೈಗಾರಿಕೆಗಳ ಬಗ್ಗೆ ಮಾತನಾಡಬೇಕು ಡಿಮ್ಯಾಂಡ್ 50, ಡಿಮ್ಯಾಂಡ್ 50 ರಲ್ಲಿ ರೆಮ್ಕೋ ಬಗ್ಗೆ ಹೇಳಿದ್ದಾರೆ. ರೆಮ್ಕೋಗೆ ಇವತ್ತಿನದಿವಸ ದುಡ್ಡು ಕೊಡಬೇಕು ಎನ್ನುವ ಬಗ್ಗೆ ವಿವರ ಕೊಟ್ಟಿದ್ದಾರೆ. ಇಷ್ಟು ಮಾತ್ರ ಹೇಳ ಬೇಕಾಗಿದೆ, ರೆಂಕೋ ಕೈಗಾರಿಕೆಗೆ ಏನು ಹಣ ಸಹಾಯ ಮಾಡಿದ್ದಾರೆ, ಅದು ನಿಜವಾಗಿಯೂ ಶ್ಲಾಘನೀಯವಾದುದು ಅದಕ್ಕೆ ವಂದಿಸಬೇಕಾಗಿದೆ. ಕೈಗಾರಿಕೆ ಹಾಳಾಗಿ ಹೋಗುತ್ತಿತ್ತು, ಸರ್ಕಾರ ಕೈಗಾರಿಕೆಯನ್ನು ನಡೆಸುತ್ತಿದೆ ಈ ಕೈಗಾರಿಕೆಯನ್ನು ನಡೆಸುವುದಕ್ಕೆ ಸಾರ್ವಜನಿಕರು ಮುಂದೆ ಬರಬೇಕೆಂದು ಧೋರಣೆ ಇಟ್ಟಿದ್ದಾರೆ, ಅದು ಒಳ್ಳೆಯ ಅಭಿಪ್ರಾಯ ಎಂದು ತಿಳಿದುಕೊಂಡಿದ್ದೇನೆ. ಅದೇ ಸಮಯಕ್ಕೆ ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರಬೇಕಾಗಿದೆ, ಹಣ ಕೊಟ್ಟರೆ ಸಾಕಾಗುವುದಿಲ್ಲ, ಏನೇನು ಕಾರ್ಯಕ್ರಮವನ್ನು ರೆಂಕೋ ವಿಷಯದಲ್ಲಿ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ, ಈಗಾಗಲೇ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ ರಿಪೋರ್ಟ್ ಕೊಟ್ಟಿದೆ, ಪದೇ ಪದೇ ನಾನು ಮತ್ತು ಸದಸ್ಯರು ಒತ್ತಾಯ ಮಾಡುತ್ತಿದ್ದೇವೆ. ಅಡ್ಮಿನಿಸ್ಟ್ರೇಷನ್ ಬಗ್ಗೆ ಬೇರೆ ತೀರ್ಮಾನ ತೆಗೆದುಕೊಳ್ಳಬೇಕು ಅದು ಮಾಡಲಿಲ್ಲ, ಮ್ಯಾನೇಜಿಂಗ್ ಡೈರೆಕ್ಟರ್ ಇಲ್ಲ. ಇಬ್ಬರು ಕನ್‌ಸಲ್ಟೆಂಟ್ಸ್ ಇವತ್ತಿನ ದಿವಸ ಅರ್ಥಂಬರ್ಥ ಕೆಲಸ ಮಾಡಿದ್ದಾರೆ. ಅವರನ್ನು ಕೇಳಿದರೆ ಇವರ ಮೇಲೆ ಹಾಕುತ್ತಾರೆ, ಇವರನ್ನು ಕೇಳಿದರೆ ಅವರ ಮೇಲೆ ಹಾಕುತ್ತಾರೆ. ನಮ್ಮ ಪ್ರತಿಪಾದನೆಗೆ ಜವಾಬು ಆದ ಹಾಗೆ ಕಾಣುವುದಿಲ್ಲ ಚೇರ್ಮನ್ ರಿಟೈರ್ ಆಗದಿದ್ದರೂ ಆಗುವಂತ ಕಾಲ ಬಂದಿದೆ. ಶಾಮಣ್ಣನವರು ಆಗಿಂದಾಗ್ಗೆ ಬರುತ್ತಾರೆ. ಕೈಗಾರಿಕೆಗೆ ಎಷ್ಟು ಹಣ ಕೊಟ್ಟರೂ ಸಹ ಇನ್ನೂ ಮುಂದೆ ಬರುವುದಕ್ಕೆ ಆಗಿಲ್ಲ, ಇದರ ಬಗ್ಗೆ ಗಮನಹರಿಸಬೇಕು. ದುಡ್ಡು ಕೊಟ್ಟರೆ ಮಾತ್ರ ಸಾಕಾಗುವುದಿಲ್ಲ ಎಂದು ಹೇಳಬೇಕಾಗಿದೆ. ಈಗ ತಾನೇ ಕೇಳಿಬಂದಿರುವುದು ರೆಂಕೋ ಕೈಗಾರಿಕೆಯನ್ನು ಭಾರತ. ಹೆವಿ ಎಲೆಕ್ಟ್ರಾನಿಕ್ಸ್ ಕೊಡಬೇಕೆಂದು ಯೋಚನೆ ಮಾಡುತ್ತಾ ಇದ್ದಾರೆ ಎಂದು ತಿಳಿದುಬಂದಿದೆ ಹಾಗಾದರೂ ಮಾಡಿದರೆ ಒಳ್ಳೆಯದು. ಕೇಂದ್ರ ಸರ್ಕಾರದ ಕೈಗಾರಿಕೆ ಜೊತೆಗೆ ರೆಂಕೋ ಸೇರಿಸುವುದು ಬಹಳ ಸಂತೋಷ, ಬೇಗ ಮಾಡಿ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಡಿಮ್ಯಾಂಡ್ ನಂಬರು 25ರ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಯೂನಿವರ್ಸಿಟಿ ಎಜುಕೇಷನ್ ಬಗ್ಗೆ, ಮೈಸೂರು, ಕರ್ನಾಟಕ ಯೂನಿವರ್ಸಿಟಿ ಬಗ್ಗೆ ಹೇಳಿದ್ದಾರೆ. ಮುಖ್ಯವಾಗಿ ಡಿಯರ್‌ನೆಸ್ ವಿಷಯದಲ್ಲಿ ಏನೂ ಹೇಳಬೇಕಾಗಿಲ್ಲ, ಅದನ್ನು ಕೊಡಬೇಕಾಗಿದೆ. ಅದನ್ನು ನ್ಯಾಯವಾಗಿ ಕೊಟ್ಟಿದ್ದಾರೆ. ತಮಗೆ ಗೊತ್ತಿರುವ ಹಾಗೆ ಕ್ಲಿಷ್ಟ ಪರಿಸ್ಥಿತಿ ಇದೆ. ಮೊನ್ನೆ ದಿವಸ ಪ್ರೈವೇಟ್ ಎಯಿಡ್ ಕಾಲೇಜಿನ ಮಾಸ್ಟರ್ಸ್ ಎಕ್ಸಾಮಿನೇಷನ್‌ಗೆ ಇಂದು ಸಹ ಕಾಂಡಕ್ಟ್ ಮಾಡುವುದಿಲ್ಲ ಎಂದು ಪ್ರತಿಭಟನೆ ತೋರಿಸಿ ಅದು ನಡೆಯುತ್ತಾ ಇದೆ. ಯು.ಜಿ.ಸಿ. ಸ್ಕೇಲ್ ಕೊಡಬೇಕು ಎಂದು ಕೇಳುತ್ತಿದ್ದಾರೆ. ಯು.ಜಿ.ಸಿ. ಸ್ಕೇಲ್ಸ್ ಬಗ್ಗೆ ಏನು ಯೋಚನೆ ಮಾಡಿದ್ದೀರಿ. ಅವರು ಕೇಳುತ್ತಾ ಇರುವುದು ಚೆಕ್ ಸಿಸ್ಟಮ್ ಆಧಾರದ ಮೇಲೆ ಸಂಬಳವನ್ನು ಉಪಾಧ್ಯಾಯರಿಗೆ, ಕಾಲೇಜ್ ಟೀಚರ್ಸ್‌ಗೆ ರೀಡರ್ಸ್‌ಗೆ ಕೊಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು. ಸರ್ಕಾರ 80 ಪರ್ಸೆಂಟ್ ಕೊಡುತ್ತಾ ಇದೆ, 20 ಪರ್ಸೆಂಟ್ ಇವತ್ತಿನ ದಿವಸ ಪ್ರೈವೇಟ್ ಕಾಲೇಜಿನವರು ತುಂಬಬೇಕಾಗಿದೆ. ಸೆಕೆಂಡರಿ ಎಜುಕೇಷನ್‌ಗೆ ಹೇಗೆ ಮಾಡಿದ್ದಾರೆ, ಅದೇರೀತಿ 20 ಪರ್ಸೆಂಟ್‌ನ್ನೂ ಸರ್ಕಾರ ತೆಗೆದುಕೊಂಡು ಪ್ರೈವೇಟ್ ಕಾಲೇಜುಗಳಿಗೂ ಮಾಡಬೇಕಾಗಿದೆ, ಇದರ ಕಡೆ ಗಮನಹರಿಸಬೇಕಾಗಿದೆ ಎಂದು ಹೇಳಬೇಕಾಗಿದೆ. ಮಾನವೀಯ ದೃಷ್ಟಿಯಿಂದ ಬಗೆಹರಿಸುವ ಸಂಕಲ್ಪ ಸರ್ಕಾರ ಮಾಡಬೇಕು. ಯು.ಜಿ.ಸಿ. ಸ್ಕೇಲ್ಸ್ ಕೊಟ್ಟರೆ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತದೆ. ಚೆಕ್ ಸಿಸ್ಟಮ್ ಕಡೆಗೂ ಗಮನಹರಿಸಬೇಕು, ಇದರಲ್ಲಿ ಸ್ವಲ್ಪ ಫೈನಾನ್ಷಿಯಲ್ ಇಂಪ್ಲಿಕೇಷನ್ ಆಗಬಹುದು......ಇದಕ್ಕೂ ಯು.ಜಿ.ಸಿ. ಸ್ಕೇಲ್ಸಗೂ ಅಜಗಜಾಂತರ ವ್ಯತ್ಯಾಸ ಆಗಬಹುದು. ಪೋಲೀಸ್ ರೈಲ್ವೆ ಸ್ಟ್ರೈಕ್‌ಗೆ ತಾವು ಹಣ ಕೊಟ್ಟಿದ್ದೀರಿ 5 ಲಕ್ಷ ಕೊಡಬೇಕು ಎಂದು ಮಾಡಿದ್ದೀರಿ, ರೈಲ್ವೆ ಸ್ಟ್ರೈಕಿನಲ್ಲಿ ಸರ್ಕಾರ ಯಾವ ರೀತಿ ವರ್ತಿಸಿತು ಅದನ್ನು ಮಾತ್ರ ಹೇಳಬೇಕಾಗಿದೆ. ರೈಲ್ವೆಸ್ಟ್ರೈಕ್ ಹತ್ತಿಕ್ಕುವುದಕ್ಕೆ ದಮನ ಅಸ್ತ್ರವನ್ನು ಉಪಯೋಗಿಸಿದ್ದು ತೀವ್ರವಾಗಿ ಖಂಡಿಸಬೇಕಾಗಿದೆ. ರೈಲ್ವೆ ಸ್ಟ್ರೈಕ್ ರಾಜಕೀಯವಾಗಿ ಉಪಯೋಗಿಸುವುದಕ್ಕೆ ಪ್ರಯತ್ನ ಪಟ್ಟರು. ಅದು ಸರಿಯಾದುದು ಅಲ್ಲ. ಟ್ರೇಡ್ ಯೂನಿಯನ್ ಹೋರಾಟ ಆಗಿದ್ದರೆ ಸಮರ್ಪಕವಾದ ರೀತಿಯಲ್ಲಿ ಇತ್ಯರ್ಥವಾಗುತ್ತಿತ್ತು. ಕಾರ್ಮಿಕರನ್ನು ಹತ್ತಿಕ್ಕುವುದಕ್ಕೆ ಒಂದು ದೊಡ್ಡ ರೀತಿಯಲ್ಲಿ ಪ್ರಚಾರ ಮಾಡಿದ್ದಾರೆ ಅದು ಸರಿಯಾದುದು ಅಲ್ಲ, ಇದಕ್ಕೆ ಪೋಲೀಸರನ್ನು ಬಳಸಿಕೊಂಡರು ಎಂದು ಹೇಳಬೇಕಾಗಿದೆ.

10-00 A.M.

ಇವೊತ್ತು ರೈಲ್ವೇ ಕೆಲಸಗಾರರ ಬಗ್ಗೆ ನಿಮಗೆ ಸಂಬಂಧವಿಲ್ಲದಿದ್ದರೂ ಸಹ ನಮ್ಮ ಕರ್ನಾಟಕ ರಾಜ್ಯದಲ್ಲಿರುವ ರೈಲ್ವೇ ಕೆಲಸಗಾರರ ಪೈಕಿ ಅನೇಕರು ಇನ್ನೂ ಸಸ್ಪೆಂಡ್‌ನಲ್ಲಿದ್ದಾರೆ, ಡಿಸ್‌ಮಿಸ್ ಆದವರು ಕೆಲವರು ಇದ್ದಾರೆ ; ಇಂತಹವರಿಗೆ ಅನುಕೂಲ ಮಾಡಿಕೊಡುವುದು ತಮ್ಮ ಜವಾಬ್ದಾರಿ ಎಂದು ನಾನು ಹೇಳುತ್ತೇನೆ. ಇಲ್ಲಿ ಹಣ ಮಾತ್ರ ಈ ಬಗ್ಗೆ ಕೇಳಿದ್ದೀರಿ, ಅದರ ಜೊತೆಗೆ ಅವರಿಗೆ ಅನುಕೂಲಗಳನ್ನು ಸಹ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 33 ಬಹಳ ಮುಖ್ಯವಾದುದು ; ಸಬ್ಸಿಡೈಸ್ಡ್ ಹೌಸಿಂಗ್ ಸ್ಕೀಮ್ ಫಾರ್ ಪ್ಲಾನ್‌ಟೇಷನ್ ವರ್ಕರ್ಸ್ ಬಗ್ಗೆ ಹಣ ಕೇಳಿದ್ದೀರಿ. ಇದು ಬಹಳ ಒಳ್ಳೆಯ ಯೋಜನೆ. ಇದಕ್ಕೆ ಕೇಂದ್ರದಿಂದ ಹಣವೇನೋ ಬರುತ್ತದೆ. ಆದರೆ ಅದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುತ್ತಿಲ್ಲ ; ಇದರಿಂದ ಆ ಹಣ ಲ್ಯಾಪ್ಸ್ ಆಗುತ್ತಿದೆ. ಇದಕ್ಕೆ ಅವಕಾಶ ಕೊಡದೆ ಆ ನೌಕರರಿಗೆ ಮನೆಗಳನ್ನು ಕಟ್ಟಿಸಿಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಕೇರಳ ಮೊದಲನೆ ಸ್ಥಾನದಲ್ಲಿದೆ ; ಎರಡನೆ ಸ್ಥಾನ ತಮಿಳುನಾಡಿಗೆ ಬರುತ್ತದೆ. ಕೊನೆಯ ಸ್ಥಾನ ಕರ್ನಾಟಕ ರಾಜ್ಯಕ್ಕೆ ಬರುತ್ತದೆ. ಅದಕ್ಕಾಗಿಯೇ ನಮ್ಮ ರಾಜ್ಯದಲ್ಲಿ ಪ್ಲಾನ್‌ಟೇಷನ್ ಕೈಗಾರಿಕೆ ಮುಂದುವರೆದಿಲ್ಲ ; ಈ ದೃಷ್ಟಿಯಿಂದ ನೌಕರರಿಗೆ ಅನುಕೂಲವಾಗುವಂತೆ ಮಾಡಲು ಇದರ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂ. 1 ಮತ್ತು ಡಿಮ್ಯಾಂಡ್ ನಂ. 19ರ ಬಗ್ಗೆ ಹೇಳಬೇಕೆಂದರೆ ಶಾಸಕರ ಭವನ ಮೊದಲು ಮಾನ್ಯ ಚೆನ್ನಬಸಪ್ಪನವರ ಕೈಯಲ್ಲಿತ್ತು, ಈಗ ಮಾತ್ರ ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ಗೆ ಅದರ ಅಧಿಕಾರ ಬಂದಿದೆ. ಈಗ ವಸತಿಸೌಕರ್ಯ ಮತ್ತು ಊಟದ ಬಗ್ಗೆ ಕಂಪ್ಲೈಂಟ್ ಬರುತ್ತಿದೆ ; ಜನರಲ್ ಹಾಸ್ಟಲ್ ಬಗ್ಗೆ ಸಹ ಕಂಪ್ಲೈಂಟ್ ಇದೆ. ಇದರ ಕಡೆಗೆ ಸ್ವಲ್ಪ ಗಮನ ಕೊಡಬೇಕೆಂದು ಹೇಳುತ್ತೇನೆ. ಮತ್ತು ಅಲ್ಲಿರುವ ಪ್ರತಿ ರೂಮಿಗೂ ಪ್ರತ್ಯೇಕವಾದ ಟೆಲಿಫೋನ್ ವ್ಯವಸ್ಥೆ ಇರಬೇಕೆಂದು ಹೇಳುತ್ತೇನೆ. ಈಗಿರುವ ವ್ಯವಸ್ಥೆ ಸರಿಯಾಗಿಲ್ಲ ;

ಅಧ್ಯಕ್ಷರು.—ಇದರ ಬಗ್ಗೆ ಮಾನ್ಯ ಸದಸ್ಯರಲ್ಲಿ ನನ್ನ ಒಂದು ಮನವಿ ಏನೆಂದರೆ, ಸದಸ್ಯರು ಇಲ್ಲದಿರುವ ಸಮಯದಲ್ಲಿ ಬೇರೆಯವರು ರೂಮುಗಳನ್ನು ಉಪಯೋಗಿಸಿದರೆ ಬಹಳ ಕಷ್ಟವಾಗುತ್ತದೆ. ಈಗ 14 ಲೈನ್‌ಗಳು ಇವೆ. ಸದಸ್ಯರಿಗಿಂತ ಗೆಸ್ಟ್‌ಗಳೇ ಹೆಚ್ಚಾಗಿ ಉಪಯೋಗ ಮಾಡುತ್ತಿರುವುದರಿಂದ ಬಹಳ ಕಷ್ಟಬರುತ್ತಿದೆ, ಆದಕಾರಣ ಈ ಬಗ್ಗೆ ಮಾನ್ಯ ಸದಸ್ಯರು ಕೋ-ಆಪರೇಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯದಲ್ಲಿ ನಮ್ಮ ಪೂರ್ಣ ಸಹಕಾರ ಕೊಡುತ್ತೇವೆ. ಈಗ ಪಿ.ಎ.ಬಿ. ಸಿಸ್ಟಮ್ ಇದೆ. ಅದರ ಬದಲು ಪ್ರೈವೇಟ್ ಆಗಿ ಟೆಲಿಫೋನ್ ಮಾಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಅಂದರೆ ಪ್ರತಿ ರೂಮಿಗೂ ಪ್ರತ್ಯೇಕವಾದ ಟೆಲಿಫೋನ್ ವ್ಯವಸ್ಥೆ ಇರಬೇಕೆಂದು ಹೇಳುತ್ತೇನೆ. ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರತಿ ರಾಜಕೀಯ ಪಕ್ಷಗಳಿಗೂ ಒಂದೊಂದು ರೂಮನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ವಿರೋಧಪಕ್ಷದ ನಾಯಕರಿಗೆ ವಿಧಾನಸೌಧದಲ್ಲಿಯೇ ಒಂದು ರೂಮನ್ನು ಒದಗಿಸಲಾಗಿದೆ. ಅದೇರೀತಿ ಬೇರೆ ಪಕ್ಷದವರಿಗೆ ಸಹ ಒದಗಿಸಬೇಕು. ವಿಧಾನಸೌಧದಲ್ಲಿ ಒದಗಿಸಲು ಸಾಧ್ಯವಾಗದಿದ್ದರೆ ಶಾಸಕರ ಭವನ ಅಥವಾ ಜನರಲ್ ಹಾಸ್ಟಲ್‌ನಲ್ಲಿಯಾದರೂ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ತಮಿಳುನಾಡು ಮತ್ತು ಕೇರಳ ರಾಜ್ಯದಲ್ಲಿ ಈ ವ್ಯವಸ್ಥೆ ಇದೆ. ಅದನ್ನು ಇಲ್ಲಿಯೂ ಜಾರಿಗೆ ತರಬೇಕೆಂದು ಹೇಳುತ್ತೇನೆ. ಜೊತೆಗೆ ನನ್ನಂತಹ ಲೋಕಲ್ ಮೆಂಬರ್‌ಗೂ ಸಹ ಒಂದೊಂದು ರೂಮನ್ನು ಒದಗಿಸಬೇಕು. ಮನೆಯಲ್ಲಿ ಯಾವಾಗಲೂ ಜನರು ಬರುತ್ತಿರುವುದರಿಂದ ಕೆಲಸ ಮಾಡಲು ಕಷ್ಟವಾಗುತ್ತದೆ. ಆದಕಾರಣ ಇಲ್ಲಿ ಬಂದು ಕೆಲಸ ಮಾಡಲು ನಮಗೂ ಪ್ರತ್ಯೇಕವಾಗಿ ರೂಮುಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ರೂಮ್‌ಗಳ ರೆಂಟ್ ಜಾಸ್ತಿ ಮಾಡಿದ್ದಾರೆಂದು ಕೇಳಿದ್ದೇನೆ. ಬೇರೆ ಕಡೆ ಇಷ್ಟೊಂದು ರೆಂಟ್ ಇಲ್ಲದಿರುವ ಕಾರಣ ಅದನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಇಲ್ಲಿ ಪೊಲ್ಯೂಷನ್ ಆಫ್ ವಾಟರ್ ಬಗ್ಗೆ ಹೇಳಿದ್ದಾರೆ. ಅದಕ್ಕೆ ಹಣ ಕೊಡಬೇಕೆಂದು ಕೇಳಿದ್ದಾರೆ. Apart from it, pollution of air is also there. Whatever is allotted is very little because, it is a very important problem which has attracted the attention of experts-both national and international. Smt. Indira Gandhi, our Prime Minister also spoke about this in a Seminar. It is the concern of all the people. Even if you have more money, it does not matter. But let effective steps be taken to see that pollution is stopped. the Birlas are not taking effective steps in Harihar Polyfibres to stop this. In spite of Mr. H. Siddaveerappa's statements several times, this has not been done. I request you to see that effective action is taken in the Birla Factory in Harihar and Ammasandra factory.

† ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಅರ್ಥಿಕ ಮಂತ್ರಿಗಳು ಮಂಡಿಸಿರತಕ್ಕಂಥ ಹೆಚ್ಚುವರಿ ಬೇಡಿಕೆಗಳನ್ನು ವಿರೋಧ ಮಾಡುತ್ತಾ, ಡಿಮಾಂಡ್ ನಂ. 1 ಮತ್ತು ಡಿಮ್ಯಾಡ್ ನಂ. 2ರ ಬಗ್ಗೆ ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಎಲ್ಲರೂ ಆ ಎರಡು ಡಿಮ್ಯಾಂಡ್‌ಗಳ ಬಗ್ಗೆ ಹೇಳಿದರೆ ಹೇಗೆ ? ಉಳಿದ ಡಿಮ್ಯಾಂಡ್‌ಗಳ ಬಗ್ಗೆ ಸಹ ಹೇಳಿ.

ಶ್ರೀ ಟಿ. ಎಂ. ಮಂಜುನಾಥ.—ಕೇಂದ್ರಚುನಾವಣಾ ಆಯೋಗದ ಮುಂದೆ ಕೆಲವು ವಿಚಾರ ಗಳನ್ನು ಹೇಳುವುದಕ್ಕೆ ನಾನು ಹೋದಾಗ ಆ ಆಯೋಗದವರು ಸಾರ್ವತ್ರಿಕ ವಿಚಾರಗಳನ್ನು ತಮ್ಮ ತಲೆಗೆ ಹಾಕಿಕೊಳ್ಳಲೇ ಇಲ್ಲ.

ಅಧ್ಯಕ್ಷರು.—ಆ ವಿಚಾರವನ್ನು ನಿಮ್ಮ ನಾಯಕರು ಹೇಳಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್.—ಇನ್ನು ಮಾನ್ಯ ಮಂತ್ರಿಗಳು ಯಾವಾಗಲೂ ಪ್ರವಾಸ ಮಾಡುತ್ತಾ ಸರ್ಕಾರದ ದುಡ್ಡನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮ ಊರಿಗೆ ಮಂತ್ರಿಗಳು ಪ್ರವಾಸ ಬಂದಾಗ ಸಾರ್ವಜನಿಕರಿಗೆ ಯಾವ ರೀತಿ ತೊಂದರೆಯಾಗುತ್ತಿದೆ ಎಂಬ ಬಗ್ಗೆ ಒಂದು ನಿದರ್ಶನ ಕೊಡುತ್ತೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು ಯಾವ ಕೆಲಸವಿಲ್ಲದಿದ್ದರೂ ಸಹ ನಮ್ಮ ಊರಿಗೆ ಅನೇಕ ಸಲ ಟೂರ್ ಬಂದಿದ್ದಾರೆ. ಕೆಲವರನ್ನು ಮೀಟ್ ಮಾಡಲು ಅವರು ಆ ರೀತಿ ಟೂರ್ ಬಂದಾಗಲೆಲ್ಲಾ, ಇದನ್ನೇ ಉಪಯೋಗ ಮಾಡಿಕೊಂಡು ಅಧಿಕಾರಿಗಳು ಜನತೆಯ ಶೋಷಣೆ ಮಾಡುತ್ತಿದ್ದಾರೆ. ಮಂತ್ರಿಗಳಿಗೆ ಊಟದ ವ್ಯವಸ್ಥೆ ಮಾಡಬೇಕೆಂದು ಜನರಿಂದ ನೂರು, ನೂರಿಪ್ಪತ್ತು ಈ ರೀತಿ ದುಡ್ಡನ್ನು ವಸೂಲಿ ಮಾಡುತ್ತಾರೆ. ಇದರಲ್ಲಿ ತಹಶೀಲ್ದಾರರು ಸಹ ಸಮೀಲಾಗಿದ್ದಾರೆ. ಇದು ಒಂದು ರೀತಿಯಲ್ಲಿ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಂತೆ ಆಗಿದೆ.

ಅಧ್ಯಕ್ಷರು.—ಹೊಸ ವಿಚಾರಗಳು ಏನಾದರೂ ಇದ್ದರೆ ಹೇಳಿ.

ಶ್ರೀ ಟಿ. ಎಂ. ಮಂಜುನಾಥ್.—ಮುಖ್ಯವಾಗಿ ಮಂತ್ರಿಗಳು ಅನಾವಶ್ಯಕವಾಗಿ ಟೂರ್ ಬರುವುದನ್ನು ನಿಲ್ಲಿಸಬೇಕು. ಅಧ್ಯಕ್ಷರು ಬಹಳ ಬೇಸರಪಟ್ಟುಕೊಂಡಂತೆ ಕಾಣುತ್ತದೆ ; ಅದ್ದರಿಂದ ನಾನು ಹೆಚ್ಚು ಮಾತನಾಡದೆ ಇಲ್ಲಿಗೆ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸು ಮತ್ತು ಗೃಹ ವಸತಿ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಡಿಮ್ಯಾಂಡಿನ ಬಗ್ಗೆ ಮಾತನಾಡುವಾಗ ಪ್ರತಿ ಸಲ ಬರುವಂಥಾ ಟೀಕೆಗಳೇ ಈ ಸಲ ಕೂಡ ಬಂದಿವೆ. ಮಾನ್ಯ ಸದಸ್ಯರು ಹೇಳಿದರು ಸಪ್ಲಿಮೆಂಟರಿ ಡಿಮ್ಯಾಂಡನ್ನು ತರುವ ಪದ್ಧತಿಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ ಎಂದು. ಆದರೆ ಈ ಸಲ ನಾನು ಹೇಳುವುದಾದರೆ ಈ ವರ್ಷದಲ್ಲಿ ಎರಡನೇ ಸಲ ಮಾತ್ರ ನಾವು ಸಪ್ಲಿಮೆಂಟರಿ ಡಿಮ್ಯಾಂಡನ್ನು ಈ ಸಭೆಯ ಮುಂದೆ ಇಡುತ್ತಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ 3 ಸಲ 4 ಸಲ ಸಪ್ಲಿಮೆಂಟರಿ ಬಡ್ಜೆಟ್ ಡಿಮ್ಯಾಂಡ್ ಬರುವ ಪದ್ಧತಿ ಈ ರಾಜ್ಯದಲ್ಲಿ ಈ ಸಭೆಯಲ್ಲೇ ಅಲ್ಲ ಬೇರೆ ಎಲ್ಲಾ ಕಡೆಗಳಲ್ಲಿಯೂ ಬೆಳೆದು ಬಂದಿದೆ. ಅದನ್ನು ತಪ್ಪಿಸಿ ಈ ಸಲ ಎರಡನೆಯ ಸಲ ಮಾತ್ರ ಸಪ್ಲಿಮೆಂ

ಟರಿ ಡಿಮ್ಯಾಂಡನ್ನು ನಾವು ಮಂಡಿಸುತ್ತಿದ್ದೇವೆ. ಈ ಸಪ್ಲಿಮೆಂಟರಿ ಡಿಮ್ಯಾಂಡಿನ ಗಾತ್ರ ಜಾಸ್ತಿ ಇರುವುದಕ್ಕೆ ಇದೂ ಒಂದು ಕಾರಣ ಎಂದು ನಾನು ಹೇಳುತ್ತಿದ್ದೇನೆ. 44 ಕೋಟಿ ವೆಚ್ಚದ ಬಗ್ಗೆ ಈ ಸಭೆಯ ಅನುಮತಿಯನ್ನು ಪಡೆಯಬೇಕಾಗುತ್ತದೆ. ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಕೊಟ್ಟಿರತಕ್ಕ ಒಂದು ಅಂಕಿಯಿಂದ ಯಾರೂ ಗಾಬರಿ ಪಡಬೇಕಾಗಿಲ್ಲ. ಅಫಿಷಿಯಲ್ ಎಕ್ಸ್‌ಪೆಂಡಿಚರ್ ಜಾಸ್ತಿ ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಸಪ್ಲಿಮೆಂಟರಿ ಡಿಮ್ಯಾಂಡನ್ನು ಬ್ರೇಕ್ ಅಪ್ ಮಾಡಿ ನೋಡಿದರೆ ಇದರಲ್ಲಿ ಸೇರಿರತಕ್ಕದ್ದು ಸೋಷಿಯೋ ಎಕನಾಮಿಕ್ ಕಮ್ಯುನಿಟಿ ಸರ್ವೀಸ್ ಹಾಗೂ ಎಕನಾಮಿಕ್ ಸರ್ವೀಸ್, ಡೆವಲಪ್‌ಮೆಂಟ್ ಅಂಶಗಳು ಇದರಲ್ಲಿ ಸಾಕಷ್ಟು ಸೇರಿದೆ. ಸೋಷಿಯೋ ಕಮ್ಯುನಿಟಿ ಸರ್ವೀಸ್ ಈ ಎರಡು ಬಾಬುಗಳಿಗೋಸ್ಕರ 31 ಕೋಟಿ ರೂಪಾಯಿಗಳು ಇದರಲ್ಲಿ ಅಡಕವಾಗಿದೆ. 44 ಕೋಟಿ ರೂಪಾಯಿಗಳಲ್ಲಿ 12 ಕೋಟಿ ರೂಪಾಯಿಗಳು ಮಾತ್ರ ಜನರಲ್ ಸರ್ವೀಸ್ ಗೋಸ್ಕರ ಇದೆ. 31–32 ಕೋಟಿ ರೂಪಾಯಿಗಳು ಸೋಷಿಯೋ ಎಕನಾಮಿಕ್ ಸರ್ವೀಸ್‌ಗೋಸ್ಕರ ಇದೆ. ಆದ್ದರಿಂದ ಇದು ಡೆವಲಪ್‌ಮೆಂಟ್ ಓರಿಯಂಟೆಡ್ ಅಲ್ಲ, ಡೆವಲಪ್‌ಮೆಂಟ್ ಬಿಟ್ಟು ಇರತಕ್ಕ ಬೇಡಿಕೆ ಎನ್ನುವ ವಾದವನ್ನು ಖಂಡಿತವಾಗಿಯೂ ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಇಷ್ಟೊಂದು ಹಣವನ್ನು ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ತರುವುದಾದರೆ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಕೆಟ್ಟು ಹೋಗುತ್ತದೆ. ಅಥವಾ ಅದರಿಂದ ಅಪಾಯವಾಗುತ್ತದೆ ಎನ್ನುವ ಮಾತು ಇಲ್ಲ. ತಮಗೆ ಗೊತ್ತಿರುವಂತೆ ರಿವೈಜ್ಡ್ ಎಸ್ಟಿಮೇಟಿನಲ್ಲಿ ಈ ಎಕ್ಸ್‌ಪೆಂಡಿಚರ್ ಸೇರಿದೆ. ಮತ್ತೆ ಕಳೆದ ಸಲ ಬಡ್ಜೆಟ್ ಮಂಡನೆ ಮಾಡಿದಾಗ 1974–75ನೇ ಫೈನಾನ್ಷಿಯಲ್ ಇಯರ್‌ನಲ್ಲಿ 13 ಕೋಟಿ ರೂಪಾಯಿಗಳು ಖೋತ ಆಗಬಹುದು ಎಂದು ನಿರೀಕ್ಷೆ ಇತ್ತು. ಆದರೆ ಈ ವರ್ಷ 3.5 ಕೋಟಿ ರೂಪಾಯಿಗಳು ಡಿಫಿಷಿಟ್ ಮಾತ್ರ ವರ್ಷದ ಅಖೈರಿನಲ್ಲಿ ಎದುರಿಸಬೇಕಾಯಿತು. ತಮಗೆ ಗೊತ್ತಿರುವಂತೆ ಸುಮಾರು 19–22 ಕೋಟಿ ರೂಪಾಯಿಗಳು ಡಿಫಿಷಿಟ್ ಆಗಬಹುದು ಎಂಬ ನಿರೀಕ್ಷೆ ಇತ್ತು. ಆದರೆ ಹಣಕಾಸಿನ ಪರಿಸ್ಥಿತಿಯನ್ನು ಈ ಸಾರಿ ಸ್ವಲ್ಪ ಶಿಸ್ತಿನಿಂದ ಹತೋಟಿಯಲ್ಲಿ ಇಟ್ಟುಕೊಂಡು ಕೆಲಸ ಮಾಡಿದ್ದರಿಂದ ಈ ವರ್ಷ ಡಿಫಿಜಿಟ್ 3.5 ಕೋಟಿ ರೂಪಾಯಿಗಳು ಮಾತ್ರ ಆಯಿತು ಎಂದು ನಾನು ಈಗಾಗಲೇ ತಿಳಿಸಿದ್ದೇನೆ. ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಇರತಕ್ಕ ಅಂಶಗಳನ್ನು ಸೇರಿಸಿಕೊಂಡು ರಿವೈಜ್ ಎಸ್ಟಿಮೇಟ್‌ನಲ್ಲಿ ಸೇರಿಸಿದೆ. ಇಷ್ಟು ಖರ್ಚಾದರೂ ಸಹ ಈ ವರ್ಷ 3.5 ಕೋಟಿ ರೂಪಾಯಿಗಳು ಡಿಫಿಷಿಟ್ ಬಂದಿದೆ. ಆದ್ದರಿಂದ ಈ ಸಪ್ಲಿಮೆಂಟರಿ ಡಿಮ್ಯಾಂಡಿನಿಂದ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಗೆ ಯಾವ ಧಕ್ಕೆಯೂ ಉಂಟಾಗುವುದಿಲ್ಲ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಇದರಲ್ಲಿ ಇಷ್ಟೊಂದು ಹಣ ಎಲ್ಲಿಂದ ಬಂತು ಎಂದು ಮಾನ್ಯಸದಸ್ಯರು ಕೇಳುವುದಾದರೆ, ಆ ಬಗ್ಗೆ ಸಂಕ್ಷಿಪ್ತವಾಗಿ ಹೇಳಬೇಕಾದರೆ 8.25 ಕೋಟಿ ರೂಪಾಯಿಗಳು ಸೆಂಟ್ರಲ್ ಅಸಿಸ್ಟೆನ್ಸ್‌ನಿಂದ ಬರುತ್ತದೆ. ಅಮೌಂಟ್ ಕವರ್ಡ್ ಬೈ ಅದರ್ ರೆಸಿಪ್ಟ್ಸ್ 9 ಕೋಟಿ ರೂಪಾಯಿಗಳು. ಅಮೌಂಟ್ ಕವರ್ಡ್ ಬೈ ಅಡ್ಜಸ್ಟ್‌ಮೆಂಟ್ಸ್ 13 ಕೋಟಿ ರೂಪಾಯಿಗಳು. ಕ್ಯಾಷ್‌ಔಟ್ ಗೋ 13.20 ಕೋಟಿ ರೂಪಾಯಿಗಳು. 44 ಕೋಟಿ ರೂಪಾಯಿಗಳು ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಇದ್ದರೂ ಕೂಡ ಕ್ಯಾಷ್‌ಔಟ್ ಗೋ 13 20 ಕೋಟಿ ರೂಪಾಯಿಗಳು ಮಾತ್ರ. ಇದು ಕೂಡ ರಿವೈಜ್ಡ್ ಎಸ್ಟಿಮೇಟಿನಲ್ಲಿ ಇದೆ.

ನಾವು ಆರ್ಡಿನೆನ್ಸ್ ಏತಕ್ಕೆ ತರಬೇಕಾಯಿತು ಎಂದರೆ ಕಂಟಿನ್‌ಜೆನ್ಸಿ ಫಂಡನ್ನು 10 ಕೋಟಿ ರೂಪಾಯಿಗಳಿಂದ 15 ಕೋಟಿ ರೂಪಾಯಿಗಳಿಗೆ ಏರಿಸಬೇಕಾಗಿತ್ತು. ಈ 15 ಕೋಟಿ ರೂಪಾಯಿಗಳ ಕಂಟಿನ್‌ಜೆನ್ಸಿ ಫಂಡನ್ನು ಕಾಪಾಡಿಕೊಂಡು ಬರುವ ಉದ್ದೇಶ ಸರ್ಕಾರಕ್ಕೆ ಇಲ್ಲ. ಕಂಟಿನ್‌ಜೆನ್ಸಿ ಫಂಡ್ ಮೂಲಕ ಖರ್ಚಾಗಿರತಕ್ಕ ಹಣವನ್ನು ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಸೇರಿಸಿ ಈ ಸಭೆಯ ಮುಂದೆ ತರಲೇ ಬೇಕಾಗುತ್ತದೆ. ನ್ಯೂ ಸರ್ವೀಸ್ ಹೋದಾಗ ಖರ್ಚು ಆದರೆ ಅದನ್ನು ನಾವು ಸಭೆಯ ಮುಂದೆ ತರಬೇಕಾಗುತ್ತದೆ. ಕೇಂದ್ರದಿಂದ ಬಂದಿರತಕ್ಕ ಹಣ ಆಗಿದ್ದರೂ ಕೂಡ ನಮ್ಮ ರಾಜ್ಯದ ಬೊಕ್ಕಸಕ್ಕೆ ಧಕ್ಕೆ ಬಾರದೆ ಹೋದರೂ ಕೂಡ ಹಣವನ್ನು ಖರ್ಚು ಮಾಡಿದ್ದರೆ ಬಡ್ಜೆಟ್ಟಿನಲ್ಲಿ ಇಲ್ಲದೆ ಇರತಕ್ಕ ಅಂಶವನ್ನು ಸೇರಿಸಿದ್ದರೆ ಅದು ಪುನಃ ಈ ಸಭೆಯಲ್ಲಿ ತರಬೇಕಾಗುತ್ತದೆ. ಈ ಎಲ್ಲ ದೃಷ್ಟಿಯಿಂದ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಇರತಕ್ಕ ವೆಚ್ಚ ಏನಿದೆ ಇದು ನ್ಯಾಯ ಸಮ್ಮತವಾಗಿದೆ. ಇದರಿಂದ ಹಣಕಾಸಿನ ಪರಿಸ್ಥಿತಿಗೆ ಯಾವ ತರಹ ಅಪಾಯ ಉಂಟಾಗುವುದಿಲ್ಲ. ಈ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ಹೇಳುವುದಾದರೆ ಫರ್ಟಿಲೈಜರ್‌ಗೋಸ್ಕರ ಕೇಂದ್ರ ಸರ್ಕಾರದವರು 4 ಕೋಟಿ ರೂಪಾಯಿಗಳನ್ನು ಕೊಟ್ಟರು. ಕೊಟ್ಟ ತಕ್ಷಣ ಆ ಹಣವನ್ನು ನಾವು

ಖರ್ಚು ಮಾಡಿ ಸುಮ್ಮನೆ ಇರುವುದಿಲ್ಲ. ಅಗ್ರೋ ಇಂಡಸ್ಟ್ರಿಗೋಸ್ಕರ ಕೊಟ್ಟಿದ್ದೇವೆ. ಇದನ್ನು ನಾವು ಈ ಸಭೆಯಮುಂದೆ ತರಬೇಕಾಗುತ್ತದೆ. ಆದ್ದರಿಂದ ಇಂಥಾ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ತರಬೇಕಾಗುತ್ತವೆ. ವಾಟರ್ ಸಪ್ಲೈಗೋಸ್ಕರ 1.91 ಕೋಟಿ ರೂಪಾಯಿಗಳು, ರೂರಲ್ ಕಮ್ಯುನಿಕೇಷನ್‌ಗೋಸ್ಕರ 1 ಕೋಟಿ ರೂಪಾಯಿಗಳು, ಎಜುಕೇಷನ್‌ಗೆ 1.64 ಕೋಟಿ ರೂಪಾಯಿಗಳು. ಸಪ್ಲಿಮೆಂಡರಿ ಡಿಮ್ಯಾಂಡಿನಲ್ಲಿ ಇದೆ. ಇಂಡಸ್ಟ್ರೀಸ್‌ಗೋಸ್ಕರ ರೆಮ್ಕೋ ಕೈಗಾರಿಕೆಗೆ 5.41 ಕೋಟಿ ರೂಪಾಯಿಗಳು ಇದೆ. ನಾನು ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ ಡೆವಲಪ್‌ಮೆಂಟ್ ಅಂಶಗಳ ಬಗ್ಗೆ ನಾನು ಬಡ್ಜೆಟ್ ಭಾಷಣದಲ್ಲಿ ಹೇಳಿದ ಪ್ರಕಾರ ಹೆಚ್ಚು ಕಡಿಮೆ ಬಡ್ಜೆಟ್ಟಿನಲ್ಲಿ ಹಣವನ್ನು ಇಟ್ಟಿದ್ದರೆ ಇದಕ್ಕೆ 8 ಕೋಟಿ ರೂಪಾಯಿಗಳನ್ನು ಜಾಸ್ತಿ ಖರ್ಚು ಮಾಡಿದ್ದೇವೆ. ಇದನ್ನು ಏತಕ್ಕೆ ಖರ್ಚು ಮಾಡಿದ್ದೇವೆ ಎಂದರೆ ಟ್ಯಾಕ್ಸ್ ವಸೂಲು ಮಾಡುವುದರಲ್ಲಿ ಆದಾಯ ಬಂತು, ಹೆಚ್ಚು ಹಣ ಬಂತು. ಆದ್ದರಿಂದ ಬಡ್ಜೆಟಿನಲ್ಲಿ, ಪ್ಲಾನಿನಲ್ಲಿ ನಿಗದಿ ಮಾಡಿದ್ದಕ್ಕಿಂತ 8 ಕೋಟಿ ರೂಪಾಯಿಗಳನ್ನು ಜಾಸ್ತಿಯಾಗಿ ಅಭಿವೃದ್ಧಿ ಕೆಲಸಕ್ಕೆ ಖರ್ಚು ಮಾಡಿದ್ದೇವೆ. ಇದು ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಸೇರಬೇಕಾಗುತ್ತದೆ ಇದು ಬಡ್ಜೆಟಿನಲ್ಲಿ ಸೇರಿರಲಿಲ್ಲ. ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಯಾವುದೇ ಒಂದು ಅನವಶ್ಯಕವಾಗಿರತಕ್ಕ ಖರ್ಚು ಮಾಡಿ ಅದಕ್ಕೆ ಈ ಮನೆಯ ಒಪ್ಪಿಗೆಯನ್ನು ಪಡೆಯುವ ದೃಷ್ಟಿಯಿಂದ ಇದು ತಂದಿರತಕ್ಕದ್ದಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ಈ ಚರ್ಚೆಯಲ್ಲಿ ಭಾಗವಹಿಸಿದ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರು ಎತ್ತಿರತಕ್ಕ ಪ್ರಶ್ನೆಗಳಿಗೆ ನಾನು ಉತ್ತರ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು ಹೇಳಿದರು. ರೆಂಕೋ ಕಂಪನಿಗೆ ಸಹಾಯ ಮಾಡಿರತಕ್ಕದ್ದು ಸರಿ ಎಂದು ಅದರ ಬಗ್ಗೆ ಅವರು ಸಮಾಧಾನ ವ್ಯಕ್ತಪಡಿಸಿದರು. ನನಗೆ ಇದರಿಂದ ಸ್ವಲ್ಪಮಟ್ಟಿಗೆ ಸಮಾಧಾನ ಉಂಟಾಗಿದೆ. ರೆಂಕೋ ಕಂಪನಿ ನಮ್ಮ ರಾಜ್ಯದಲ್ಲಿ ಇದೆ. ನಮಗೆ ಅದರಿಂದ ಸ್ವಲ್ಪಮಟ್ಟಿಗೆ ಸಮಾಧಾನ ಉಂಟಾಗಿದೆ. ಏಕೆಂದರೆ ರೆಮ್ಕೊ ಕಂಪೆನಿ ಇಂಡಸ್ಟ್ರಿ ಏನಿದೆಯೋ ಅದರಿಂದ ನಮ್ಮ ರಾಜ್ಯದಲ್ಲಿ ಎಲ್ಲ ದೃಷ್ಟಿಯಿಂದಲೂ ಉತ್ತಮವಾಗಿರತಕ್ಕ ಪ್ರಯೋಜನ ಉಂಟಾಗಿದೆ. ಅದಕ್ಕೆ ಏನಾದರೂ ಹಣಕಾಸಿನ ತೊಂದರೆ ಇದ್ದರೆ ಅದನ್ನು ನಿವಾರಿಸಿ ಪುನಃ ಅದು ಒಂದು ಭದ್ರವಾದ ತಳಹದಿಯ ಮೇಲೆ ಹೋಗತಕ್ಕ ಕಾರಣ ನಮಗೆಲ್ಲರಿಗೂ ಅದು ಒಳ್ಳೆಯ ಹೆಸರನ್ನು ತರತಕ್ಕದ್ದು ಆಗಿದೆ, ಈ ಒಂದು ದೃಷ್ಟಿಯಿಂದ ನಾವು ಸಾಕಷ್ಟು ಪ್ರಮಾಣದಲ್ಲಿ ರೆಮ್ಕೊ ಕಂಪೆನಿಗೆ ಸಹಾಯ ಮಾಡಿದ್ದೇವೆ. ಇದರ ಪರಿಣಾಮವಾಗಿ ರೆಮ್ಕೊ ಕಂಪೆನಿ ಪರಿಸ್ಥಿತಿ ಬಹಳ ಮಟ್ಟಿಗೆ ಸುಧಾರಣೆಯಾಗಿದೆ. ಕೆಲವು ಅಂಕಿ ಸಂಖ್ಯೆಗಳನ್ನು ನಾನು ಹೇಳಬೇಕಾದರೆ 1973-74 ರಲ್ಲಿ ರೆಮ್ಕೊ ಸೇಲ್ಸ್ ಒಂದು ಕೋಟಿ 49 ಲಕ್ಷ ರೂಪಾಯಿಗಳು. 1974-75ರಲ್ಲಿ ಸೇಲ್ಸ್ 3 ಕೋಟಿ 20 ಲಕ್ಷ ರೂಪಾಯಿಗಳು. ಸೇಲ್ಸ್ ಟರ್ನ್‌ಓವರ್ ಸಾಕಷ್ಟು ಪ್ರಮಾಣದಲ್ಲಿ ಜಾಸ್ತಿಯಾಗಿದೆ. 1973-74ರಲ್ಲಿ ನಷ್ಟ ಒಂದು ಕೋಟಿ 19ಲಕ್ಷ ಇದ್ದರೆ, 1974-75ರಲ್ಲಿ 55ಲಕ್ಷಕ್ಕೆ ಇಳಿದಿದೆ. ನಮ್ಮ ಪ್ರಾಜೆಕ್ಷನ್ ಪ್ರಕಾರ 1975-76ರಲ್ಲಿ ಅದರ ಸೇಲ್ 4 ಕೋಟಿ 37 ಲಕ್ಷವಾಗಿ ನಷ್ಟ 4ಲಕ್ಷ ಆಗಬಹುದೆಂದು ನಾನು ಪ್ರಾಜೆಕ್ಟ್ ಮಾಡಿದ್ದೇನೆ. 1975-76ರಲ್ಲಿ ಸೇಲ್ಸ್ 4 ಕೋಟಿ 79ಲಕ್ಷ ಆಗುತ್ತದೆ ಅಂದಮೇಲೆ ಸ್ವಲ್ಪ ಲಾಭ ಪಡೆಯುವುದಕ್ಕೆ ಸಾಧ್ಯವಿದೆ. ಹೀಗೆ ಪ್ರಾಜೆಕ್ಷನ್ ಮಾಡಿ ಅದರ ಪ್ರಕಾರ ನಡೆಸಿದರೆ 78-79ರಲ್ಲಿ 6 ಕೋಟಿ 70 ಲಕ್ಷ ರೂಪಾಯಿಗಳಷ್ಟು ಸೇಲ್ಸ್ ಟರ್ನ್ ಓವರ್ ಆಗಿ ಅದರಿಂದ ಒಂದು ಕೋಟಿ 34 ಲಕ್ಷ ರೂಪಾಯಿಗಳಷ್ಟು ಲಾಭ ಮಾಡುವುದಕ್ಕೆ ಸಾಧ್ಯ. ಆ ಪ್ರಜೆಕ್ಷನ್ ಮಾಡಿದ್ದಾರೆ. ಆ ಪ್ರಾಜೆಕ್ಷನ್ ಆಧಾರದಮೇಲೆ ನಾವು ಸಹಾಯಮಾಡಿದ್ದೇವೆ. ಭಾರತ್ ಎಲೆಕ್ಟ್ರಾನಿಕ್ಸ್ ಸಹ ಇದ್ದುದರಲ್ಲಿ ಉದ್ಯೋಗಗಳಿಗೆ ಹೆಚ್ಚಿನ ಆಶ್ರಯ ಕೊಡುವಂತಹ ಕಾರ್ಖಾನೆ ಆಗಿದೆ. ಇದನ್ನು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ರೆಮ್ಕೋಗೆ ಏನಾದರೂ ಕೋಆಪರೇಷನ್ ಹೆಚ್ಚಿಸುವುದಕ್ಕೆ ಸಾಧ್ಯವಾದರೆ ಮಾಡುತ್ತೇನೆ. ನನಗೆ ತಿಳಿದಮಟ್ಟಿಗೆ ನಾವು ರೆಮ್ಕೋಗೆ ಬಹಳವಾಗಿ ಸಹಾಯ ಕೊಡುವ ತೀರ್ಮಾನಕ್ಕೆ ಬಂದಿಲ್ಲ, ಈಗಾಗಲೇ ಹಣಕಾಸಿನ ದೃಷ್ಟಿಯಿಂದ ಸಾಕಷ್ಟು ಸಹಾಯ ಮಾಡಿಲ್ಲ. ಅದು ಭದ್ರವಾದಂಥ ರೀತಿಯಲ್ಲಿ ಕೆಲಸಮಾಡುವುದಕ್ಕೆ ಅನುಕೂಲ ಮಾಡಿಕೊಡುವ ಪ್ರಯತ್ನವನ್ನು ಮಾಡುತ್ತಿದ್ದೇವೆ.

Sri M. S. KSISHNAN.—If the Central Government comes forward to take over and run it as a Central project, I do not think, the State Goverement should object to it.

Sri M. Y. GHORPADE.—This matter is premature- I can say categorically that once upon a time the Government of the State was contemplating selling REMCO to anyone including private. We have

no intention of selling it to any private party. Of course, to the extent there can be business relationship and commercial co-operation with the Bharat Heavy Electricals is under examination. There is no useful purpose served by anticipating things or expressing anything at this stage, Whatever may be the relationship between REMCO and Bharath Electricals, the State Government is determined to see that REMCO is enabled to work in a profitable and satisfactory manner.

ಇನ್ನು ಡಿಮ್ಯಾಂಡ್ ನಂಬರ್ 25. ಇದರ ಬಗ್ಗೆ ಮಾನ್ಯ ಸದಸ್ಯರನೇಕರು ಪ್ರಸ್ತಾಪ ಮಾಡಿದ್ದು ಒಳ್ಳೆಯದಾಯಿತು. ಏಕೆಂದರೆ, ಯೂನಿವರ್ಸಿಟಿಗೆ ನಾವು ಬ್ಲಾಕ್ ಗ್ರ್ಯಾಂಟ್ ಈ ವರ್ಷ 97 ಲಕ್ಷ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೇವೆ. ಬಡ್ಜೆಟ್‌ನಲ್ಲಿ ಏನಿದೆಯೋ ಅದಕ್ಕೂ ಹೆಚ್ಚಿಗೆ 97 ಲಕ್ಷ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೇವೆ. ಮೈಸೂರು ಯೂನಿವರ್ಸಿಟಿಗೆ 127 ಲಕ್ಷ ಕರ್ನಾಟಕ ಯೂನಿವರ್ಸಿಟಿಗೆ 115 ಲಕ್ಷ, ಬೆಂಗಳೂರು ಯೂನಿವರ್ಸಿಟಿಗೆ 92 ಲಕ್ಷ, ಯೂನಿವರ್ಸಿಟಿ ಆಫ್ ಅಗ್ರಿಕಲ್ಚರ್ ಅಂಡ್ ಸೈನ್ಸ್‌ಗೆ 162 ಲಕ್ಷ ರೂಪಾಯಿಗಳನ್ನು ಬ್ಲಾಕ್ ಗ್ರ್ಯಾಂಟ್‌ನಂತೆ ನಾವು ಈಗಾಗಲೇ ಕೊಟ್ಟಿದ್ದೇವೆ. ಇದರಲ್ಲಿ ಬಡ್ಜೆಟ್‌ಗಿಂತ 97 ಲಕ್ಷ ರೂಪಾಯಿಗಳನ್ನು ಜಾಸ್ತಿ ಇವರಿಗೆ ಕೊಡಬೇಕಾಗಿತ್ತು. ಏಕೆಂದರೆ, ಡಿ. ಎ. ಜಾಸ್ತಿ ಕೊಟ್ಟಿದ್ದರಿಂದ ಯೂನಿವರ್ಸಿಟಿಗೆ ಇದರ ಒಂದು ಹೆಚ್ಚಳದಿಂದ ಯಾವ ಒಂದು ತೊಂದರೆಗೂ ಈಡಾಗಬಾರದೆಂದು ಆ ರೀತಿ ಮಾಡಬೇಕಾಯಿತು. ಇದರ ಬಗ್ಗೆ ಸಾಕಷ್ಟು ಸರ್ಕಾರಕ್ಕೆ ಸಂಪಾದನೆ ಇದೆ, ಯೂನಿವರ್ಸಿಟಿಗಳಿಗೂ ಸಾಕಷ್ಟು ಸಂಪಾದನೆ ಇದೆ. ಇದು ಬಹಳ ಮುಖ್ಯವಾದಂಥ ಅಂಶ. ಅದನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಸಂತೋಷಪಡುತ್ತೇನೆ. ಮತ್ತೆ ಗುಲ್ಬರ್ಗಾ ಪೋಸ್ಟ್ ಗ್ರ್ಯಾಜುಯೇಟ್ ಸೆಂಟರ್ ಗೋಸ್ಕರ 15 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದೂ ಕೂಡ ಬೆಳೆಯಬೇಕೆಂದು ಯು. ಜಿ. ಸಿ. ಹಣವನ್ನು ಉಪಯೋಗಿಸಿ ಮ್ಯಾಚಿಂಗ್ ಗ್ರ್ಯಾಂಟನ್ನು ರಾಜ್ಯ ಸರ್ಕಾರದವರು ಕೊಡಬೇಕೆಂಬ ಧೋರಣೆ ಇದೆ. 5 ನೇ ಪಂಚವಾರ್ಷಿಕ ಯೋಜನೆಯಲ್ಲಿ ಅದರ ಬಗ್ಗೆ ಯಾರಿಗೂ ಅನುಮಾನ ಬೇಕಿಲ್ಲ.

ಇನ್ನು ಐಟಂ ನಂಬರ್ 5 ರಲ್ಲಿ ಗ್ರ್ಯಾಂಟ್ ಸೇಕಡ 80 ರಷ್ಟು ಅದಕ್ಕಿಂತ ಹೆಚ್ಚಿಗೆ ಇರಬಾರದೆಂದು ಸ್ಟ್ಯಾಟ್ಯೂಟರಿ ಲಿಮಿಟ್ಟನ್ನು ತೆಗೆದುಹಾಕಿದ್ದೇವೆ. ಈಗ ಡಿ. ಎ. ಗೆ. ಖರ್ಚು ಜಾಸ್ತಿ ಆಗುವುದರಿಂದ ಪ್ರೈವೇಟ್ ಕಾಲೇಜುಗಳ ಮ್ಯಾನೇಜ್‌ಮೆಂಟ್‌ನಲ್ಲಿ ಬಹಳವಾಗಿ ತೊಂದರೆಯಾಗುತ್ತಿದೆ. ಆ ರೀತಿ ತೊಂದರೆ ಆಗಬಾರದು. ಅದಕ್ಕೂ ಗ್ರ್ಯಾಂಟ್ ಇನ್ ಏಡ್ ಲಿಮಿಟ್ಟನ್ನು ಹಾಕಬೇಕಾಯಿತು. ಅದರಿಂದ ಡಿಮ್ಯಾಂಡ್ ನಂಬರ್ 5ರಲ್ಲಿ ಸೇರಿಸಿದ್ದೇವೆ.

ಇನ್ನು ಯು. ಜಿ. ಸಿ. ಬಗ್ಗೆ ಕೆಲವರು ಪ್ರಸ್ತಾಪ ಮಾಡಿದ್ದಾರೆ. ಅದು ಬೇರೆ ವಿಷಯ. ಆದರೆ ಸರ್ಕಾರದವರು ಯು. ಜಿ. ಸಿ. ಸ್ಕೇಲ್‌ಗಳನ್ನು ಕೊಡುವುದಕ್ಕೆ ತಕ್ಷಣ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಅದರ ಬಗ್ಗೆ ಉಪಾಧ್ಯಾಯರು ಸರ್ಕಾರದ ಮೇಲೆ ಯಾವ ತರಹ ಪ್ರೆಷರನ್ನು ತರುವುದಕ್ಕೆ ಪ್ರಯತ್ನ ಮಾಡಬಾರದು ನನಗೆ ಬಹಳ ಇದು ವ್ಯಥೆ ಅನ್ನಿಸುತ್ತದೆ. ಅವರು ಪರೀಕ್ಷೆಗಳಿಗೆ ಹೋಗದೆ ಎಷ್ಟೋ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ರೀತಿಯಲ್ಲಿ ವರ್ತಿಸಿದ್ದೇ ಆದರೆ ಅದು ಸಮಂಜಸವಾದ ರೀತಿನೀತಿ ಅಲ್ಲ. ಅದು ಹಣಕಾಸಿನ ದೃಷ್ಟಿಯಿಂದ ಸದ್ಯಕ್ಕೆ ಸಾಧ್ಯವಿಲ್ಲ. ಅಂಥಾದ್ದನ್ನು ಸರ್ಕಾರಕ್ಕೆ ಒಪ್ಪಿಸುವುದಕ್ಕೆ ಯಾರಾದರೂ ಪ್ರಯತ್ನ ಮಾಡಿದರೆ ಅದು ಒಳ್ಳೆಯದಲ್ಲ ಯಾರಿಗೆ ಬ್ಯಾಂಕುಗಳಲ್ಲಿಯೇ ಆಗಲಿ ಅಥವಾ ಎಲ್ಲಿ ಸಂಘ ಸಂಸ್ಥೆಗಳು ಸಂಘಟಣೆ ಮಾಡುವ ಶಕ್ತಿ ಜಾಸ್ತಿ ಇದೆಯೋ ಅಂತಹವರು ಹೆಚ್ಚು ಸಂಬಳ ತೆಗೆದುಕೊಳ್ಳುವುದು ಉಂಟು. ಮಾನ್ಯ ಶ್ರೀ ದೇವೇಗೌಡರು ಹೇಳಿದ ಪ್ರಕಾರ ಹಳ್ಳಿಗಳಲ್ಲಂತೂ ಆ ರೀತಿಯಾಗಿ ಸೇಕಡ 80 ರಷ್ಟು ಸಂಘಟನೆ ಮಾಡುವ ಪರಿಸ್ಥಿತಿ ನಮ್ಮ ದೇಶದಲ್ಲಿಲ್ಲ. ಈ ರೀತಿ ಯಾರು ಸಮಾಜದಲ್ಲಿ ಒಂದು ಅನುಕೂಲವಾದಂಥ ಪರಿಸ್ಥಿತಿಯನ್ನು ಪಡೆದಿದ್ದಾರೋ ಅವರಿಗೆ ಆ ಒಂದು ವಾದವನ್ನು ಬಲವಾಗಿ ಪ್ರಸ್ತಾಪ ಮಾಡುವ ಅವಕಾಶ ಇದೆ. ಅಂತಹವರು ರಾಷ್ಟ್ರದ ದೃಷ್ಟಿಯಿಂದ ಇಡೀ ದೇಶದಲ್ಲಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಹಣ ಯಾವ ರೀತಿ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುವುದು ಸೂಕ್ತ. ಇಲ್ಲದೇ ಹೋದರೆ Government is not prepared to be pressurised in this manner by any group and the Minister for Education has already made it clear that the UGC scales cannot at once be accepted without going into its full implications.

ಶ್ರೀ ಎಂ. ಎಸ್. ಕೃಷ್ಣನ್.—ಪ್ರೆಷರೈಜ್ ಮಾಡಕೂಡದೆಂದು ತಾವು ಹೇಳಿದಿರಿ. ಏತಕ್ಕೋಸ್ಕರ ? ಕಾರಣಗಳು ಏನೆಂಬುದು ತಮಗೇ ಗೊತ್ತಿದೆ, to hold the society to ransom. Before pressurising, they have several times approached the Government. They have discussed with the Minister. But nothing has happened even with regard to the rest of the demands. Naturally they are forced to take action. It is your own inaction that resulted in this.

10-30 A. M.

Sri M. Y. GHORPADE.—We are all friends of educational institutions and we have the highest respect for those who are performing very responsible function in the institutions of higher education. Nobody need have any doubt about Government's sympathy for these institutions and those who are working in them. At the sametime I must state very clearly that when issues involving financial implications of large magnitude, no responsible Government can take a decision under pressure and in a hurry. There are various other aspects which may not have much financial implications which are also part of the demands. I have to give a friendly suggestion to them. I think much useful purpose can be served better by sitting together with the Hon. Minister and discuss these matters in a calm atmosphere and then see to what extent what demands can be implemented ; but to take a rigid line that unless this is done we are going to harm the interests of the students and the parents in Karnataka is certainly an anti-social attitude and it may not have the sympathy of the Community at large.

Sri M. S. KRISHNAN.—Discussion has already taken place but nothing has happened.

ಶ್ರೀ ಎಂ. ವೈ. ಘೋರ್ಪಡೆ.—ಯು. ಜಿ ಸಿ. ಯ ವಿಷಯ ಸಾಕಷ್ಟು ಗೊತ್ತಿದೆ, ಯಾವ ರಾಜ್ಯವೂ ಇದನ್ನು ತಕ್ಷಣ ಒಪ್ಪುಪುದಕ್ಕಾಗುವುದಿಲ್ಲ. ಹೀಗೆ ಇರುವಾಗ ಉಪಾಧ್ಯಾಯರು ಪರೀಕ್ಷೆಗಳಿಗೆ ಹೋಗದೆ ವಿದ್ಯಾರ್ಥಿಗಳಿಗೆ ಅನಾನುಕೂಲ ಮಾಡಿದರೆ ಒಳ್ಳೆಯದು ಎಂದು ಹೇಗೆ ಹೇಳಲಿಕ್ಕಾಗುತ್ತದೆ ? ಅಂದಮಾತ್ರಕ್ಕೆ ಉಪಾಧ್ಯಾಯರ ಮೇಲೆ ಸಹಾನುಭೂತಿ ಇಲ್ಲ ಎಂದಲ್ಲ. But this is not the way to do it. You will have to see whatever may be the consequences from the point of view of temporary popularity or unpopularity.

Sri T. R. SHAMANNA.—Will you please see that proper action is taken to see that the student's cause is not hampered ?

Sri M. Y. GHORPADE.—I am sure hte concerned Minister will make every effort in that direction. I am only provoked to say this because this was highlighted in the supplementary demands that it has no direct connection.

ಮಾನ್ಯ ವಿರೋಧಪಕ್ಷದ ನಾಯಕರು ಡಿ ಎ ಕೊಡುವ ವಿಚಾರದಲ್ಲಿ ಸರ್ಕಾರದ ಧೋರಣೆಯ ಬಗ್ಗೆ ಏನು ಮಾತನಾಡಿದರು ಅದಕ್ಕೆ ನಾನು ತುಂಬಾ ರುಣಿಯಾಗಿದ್ದೇನೆಂದರೆ ತಪ್ಪೇನೂ ಅಲ್ಲ. ವಿರೋಧಪಕ್ಷದನಾಯಕರು ಬಹಳ ಜವಾಬ್ದಾರಿಯಾದ ರೀತಿಯಲ್ಲಿ ಮಾತನಾಡಿದ್ದಾರೆ, ಅವರು ಯಾವ ವಿಷಯಗಳನ್ನು ಪ್ರಸ್ತಾಪಮಾಡಿದರು ಅದಕ್ಕೂ ಮತ್ತು ಸರ್ಕಾರದ ಧೋರಣೆಗೂ ಅಂಥ

ವ್ಯತ್ಯಾಸವೇನೂ ಇಲ್ಲ. ಅವರು ಸ್ಪಷ್ಟವಾಗಿ ಒಂದು ಪ್ರಶ್ನೆಯನ್ನು ಕೇಳಿದರು, ಬಿಲೋ ಪಾವರ್ಟಿ ಲೈನ್‌ನಲ್ಲಿರತಕ್ಕ ಜನ 100ಕ್ಕೆ 80ರಷ್ಟು ಇದ್ದಾರೆ, ಅವರ ಪರವಾಗಿ ಮಾತನಾಡುವವರು ಯಾರು ಎಂದು. ಸಂಬಳ ಜಾಸ್ತಿ ಮಾಡುವಾಗ, ಪೇ ಕಮೀಷನ್ ಅನ್ನು ನೇಮಕ ಮಾಡುವಾಗ ಅವರ ಬಗ್ಗೆ ಸಾಕಷ್ಟು ಸಹಾನುಭೂತಿ ಇದೆ, ಬಿಲೋ ಪಾವರ್ಟಿ ಲೈನ್‌ನಲ್ಲಿರತಕ್ಕ ಜನರ ಬಗ್ಗೆಯೂ ಗಮನ ಕೊಡಬೇಕು ಎನ್ನುವ ಮಾತನ್ನು ಅವರು ಹೇಳಿದರು. ಮತ್ತೆ ಇನ್ನೊಂದು ಮಾತನ್ನು ಅವರು ಹೇಳಿದ್ದಾರೆ. Employees should realise the Government difficulties ಸರ್ಕಾರದ ಧೋರಣೆ ಏನು ಇದೆ ಅದನ್ನು ಎಂಪ್ಲಾಯಿಸ್ ತಿಳಿದುಕೊಳ್ಳಬೇಕು. Resourest eaten by salaries. ನಾವು ಏನು ತೆರಿಗೆಗಳನ್ನು ಹಾಕುತ್ತೇವೆ ಅದರಿಂದ ಸರ್ಕಾರಕ್ಕೆ ಆದಾಯ ಜಾಸ್ತಿಯಾಗುತ್ತದೆ. ಜಾಸ್ತಿಯಾದಂಥ ಆದಾಯವನ್ನು ಸಂಬಳ ರೂಪದಲ್ಲಿ ಕೊಡುವುದಾದರೆ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿಯಾಗುವುದಿಲ್ಲ ಎನ್ನುವ ಮಾತನ್ನು ಅವರೂ ಹೇಳಿದರು. Government of India has not realised the gravity and has failed to revise the national policy. ಇದೂ ಕೂಡ ಸರ್ಕಾರದ ವಿಚಾರದಲ್ಲಿದೆ. ಕೇಂದ್ರ ಸರ್ಕಾರದವರು ನ್ಯಾಷನಲ್ ಪಾಲಿಸಿ ಮಾಡಬೇಕು, ಡಿ ಎ ಕೊಡುವಾಗ ನಮ್ಮನ್ನು ಅವರು ಕನ್‌ಸಲ್ಟ್ ಮಾಡಬೇಕು ಇಲ್ಲದೆ ಹೋದರೆ ಅದರ ಪರಿಣಾಮ ರಾಜ್ಯದ ಮಟ್ಟದಲ್ಲಿ ಏನಾಗುತ್ತದೆ ಅದನ್ನು ಗಮನದಲ್ಲಿಟ್ಟುಕೊಂಡು ರಾಜ್ಯಗಳಿಗೆ ಸಹಾಯ ಮಾಡುತ್ತಾ ಹೋದರೆ ಅವರು ಯಾವ ಒಂದು ತೀರ್ಮಾನಕ್ಕಾದರೂ ಬರಬಹುದು. ಪದೇ ಪದೇ ನಾವು ಈ ವಿಷಯವನ್ನು ಹೇಳಿದ್ದೇವೆ ವಿರೋಧ ಪಕ್ಷದ ನಾಯಕರೂ ಬಹಳ ಸಷ್ಟವಾಗಿ ಹೇಳಿದ್ದಾರೆ. ಮೇಲ್ಮನೆಯ ವಿರೋಧಪಕ್ಷದ ನಾಯಕರು ಇದೇ ಧಾಟಿಯಲ್ಲಿ ಮಾತನಾಡಲಿಲ್ಲ, ಅದು ದುರ್ದೈವ. ಈ ವಿಚಾರದಲ್ಲಿ ಮಾನ್ಯ ದೇವೇಗೌಡ ಅವರಿಗೂ ಹೆಗಡೆಯವರಿಗೂ ಹೊಂದಾಣಿಕೆಯಿಲ್ಲ ಎಂದು ಕಾಣುತ್ತದೆ. ಆದಕಾರಣ, ವಿರೋಧ ಪಕ್ಷದವರು ಎಲ್ಲರೂ ಒಂದಾಗಿ ಸರ್ಕಾರದ ಧೋರಣೆಯ ಬಗ್ಗೆ ದೇವೇಗೌಡರು ಏನು ಹೇಳಿದರೋ ಅದೇ ಶಬ್ದಗಳನ್ನು ಹೇಳಿದರೆ ಕರ್ನಾಟಕ ಅಭಿವೃದ್ಧಿ ಯೋಜನೆಗಳನ್ನು ಕಾಪಾಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಧೋರಣೆಯಾದರೂ ಇಷ್ಟೆ, ನಾವು ನೌಕರರಿಗೆ ಡಿ ಎ ಕೊಡಬಾರದು ಎಂದಲ್ಲ. ತಮಗೆ ಗೊತ್ತಿರುವಂತೆ ನಾವು ಅಧಿಕಾರಕ್ಕೆ ಬಂದಮೇಲೆ ನಮ್ಮ ಶಕ್ತಿಮೀರಿ 6 ಸಲ ಡಿ ಎ ಕೊಟ್ಟಿದ್ದೇವೆ. ಇದರಿಂದ ವರ್ಷಕ್ಕೆ 38 ಕೋಟಿ ರೂಪಾಯಿಗಳ ಹೆಚ್ಚಳ ಆಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಕ್ಲಾಸ್ 3 ಮತ್ತು ಕ್ಲಾಸ್—4 ಎಂಪ್ಲಾಯಿಸ್ ಅನ್ನು ಕರೆಯಿಸಿ ಮಾತನಾಡಿ ಎಂದು ಹೇಳಿದ್ದೇನೆ. ಅವರು 100—200 ರೂಪಾಯಿಗಳನ್ನು ತೆಗೆದುಕೊಂಡು ಜೀವನ ಮಾಡಲಿಕ್ಕಾಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಈ ವಿಷಯದ ಬಗ್ಗೆ ನಾನು ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಕೇಂದ್ರಸರ್ಕಾರದವರು ಇನ್ನೂ 3 ಸ್ಟೆಪ್ಸ್ ಮುಂದೆ ಹೋಗಿದ್ದಾರೆ. ಅಷ್ಟರವುಟ್ಟಿಗೂ ನಾವು ಸಂಬಳವನ್ನು ಜಾಸ್ತಿ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈ ರೀತಿ ಸಂಬಳವನ್ನು ನಾವು ಜಾಸ್ತಿ ಮಾಡುವಾಗ ನಮ್ಮ ಅಭಿವೃದ್ಧಿ ಯೋಜನೆಗಳಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕು. ನೌಕರರು ಕೇಳಿದ ತಕ್ಷಣ ಸುಮಾರು 14—15 ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಟ್ಟು ನಮ್ಮ ಪ್ಲಾನನ್ನು ಕಡಿಮೆ ಮಾಡುವುದಾದರೆ ಅದು ಅಷ್ಟು ಸ್ವಲ್ಪ ಒಪ್ಪುವಂಥ ವಿಚಾರವಲ್ಲ. ಈ ಮೂರು ಸ್ಟೆಪ್ಸ್ ಅನ್ನು ತಕ್ಷಣ ಕೊಡಬೇಕು ಎಂದರೂ ಅದು 16 ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಒಂದು ಸ್ಟೆಪ್ಸ್ ಕೊಡಬೇಕು ಎಂದರೂ ಅದು 4—7 ಕೋಟಿ ರೂಪಾಯಿಗಳಷ್ಟು ಆಗುತ್ತದೆ. 14-15 ಕೋಟಿ ರೂಪಾಯಿಗಳನ್ನು ಕೊಡುವುದಾದರೆ ನಮ್ಮ ಪ್ಲಾನ್ ಅನ್ನು ಕಡಿಮೆ ಮಾಡಬೇಕು. ಆದಕಾರಣ ಅದನ್ನು ಅಷ್ಟು ಸುಲಭವಾಗಿ ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ಮುಂದೆ ಪರಿಸ್ಥಿತಿಯನ್ನು ನೋಡಿಕೊಂಡು ಎಷ್ಟರಮಟ್ಟಿಗೆ ನಮ್ಮ ಪ್ಲಾನ್‌ಗೆ ಧಕ್ಕೆಬಾರದಂತೆ ಡಿ. ಎ. ಸಂಬಳಗಳನ್ನು ಜಾಸ್ತಿ ಮಾಡಲಿಕ್ಕೆ ಸಾಧ್ಯವಿದೆಯೋ ಅಷ್ಟನ್ನು ಸರ್ಕಾರ ಮಾಡಿಯೇ ಮಾಡುತ್ತದೆ, ಅದಕ್ಕೋಸ್ಕರ ಮುಷ್ಕರ ಹೂಡಬೇಕಾದ್ದು ಇಲ್ಲ.

ಪೇ ಕಮೀಷನ್ ಅನ್ನೂ ಮಾಡಿದ್ದೇವೆ. ನೌಕರರು ಆಜಿಟೇಷನ್ ಮಾಡಿದಮೇಲೆ ಇದನ್ನು ನಾವು ಮಾಡಿರತಕ್ಕದ್ದು ಅಲ್ಲ. ನಾವೇ ತೀರ್ಮಾನ ಮಾಡಿದ್ದೇವೆ. ನಮ್ಮ ರಾಜ್ಯದ ನೌಕರರ ಪೇ ಸ್ಟ್ರಕ್ಚರ್ ಅನ್ನು ರಿವೈಸ್ ಮಾಡುವ ದೃಷ್ಟಿಯಿಂದ ಪೇ ಕಮೀಷನ್ ಅನ್ನು ನೇಮಕ ಮಾಡಿದ್ದೇವೆ.

The pay scale in 1970 was implemented. Now we are already in 1975. Therefore in the last few years, the price rise, the conditions, the salaries, D.A. of Central Government and various State Governments and within the State there have been so many changes that it was necessary to have a comprehensive examination of pay structure in the State. Therefore the State Government took the bold decision, not under pressure, to appoint a Pay Commission, fully conscious of the financial consequenees of the Pay Commission Report and when the report is received, we have to give serious consideration. Inspite of our appointing a Pay Commission and inspite of giving six D.A. hikes which resulted in 38 crores of rupees per annum, the employees have no reason to feel uneasy about Government's intention. At the sametime the teachers cannot pressurise the Government to accept the UGC scales of pay as soon as they think of it. I do not think it is a proper procedure for the employees to expect Government to take a decision under pressure. As the hon. members are aware, the Union Finance Minister Sri C. Subramaniam has made a significant statement in his budget speech regarding D.A. He has said that he will have another round of discussion with central employees with regard to D.A. He has also said that this will take a few weeks. This being so, it is but proper that we should await what happens in Delhi ; it is but proper that the State Government should have an opportunity to place before the Centre the consequences of its decision because it is not only Karnataka State but various other States are also involved. Therefore the employees should realise that this Government will do its utmost to safeguard the interests of the employees to protect them from price rise to the extent possible but not at the expense of the people who are below poverty line for whom the plan is prepared. This is the clear policy of the Government.'

Madam Speaker, I have all respect for trade unions and trade unionism but the strategy of trade unionism should not be rationally applied by Government employees in this context because they know full well that the Government has every sympathy for them and they know full well better than anybody else that whenever Government feels confident that it can improve the emoluments without affecting the plan, it shall continue to do so But to say that all the three instalments of D.A. should be given immediately is not putting the demands in the realistic fashion. I once again congratulate the Leader of the Opposition for the clear political statement which he has made on the floor of this House that the employees should realise the difficulties of Government and Government should take care to see that the people below poverty line are not affected in any decision which the Government takes. At the sametime he has also stated that we should extend every sympathy to low paid employees. About that there are no two opinions. I have got utmost sympathy for the low-paid employees. I am fully aware of the difficulties which they are undergoing as a result of price rise. My only difficulty is that because

we are conscious of it, we will continue to do our best to protect them from the difficulties of price rise. But this has to be seen in the total context, not out of context and Government should not be pressurised in this manner.

I do not want to take into the details of the price rise situation except to say that it is heartening that in the last three months the price rise has been abatted and the prices are not on the increase but they are showing every sign of being stablished and therefore the situation needs to be watched.

Sri KONANDUR LINGAPPA.—It is not poor man's experience.

ಶ್ರೀ ಎಂ. ವೈ. ಘೋರ್ಪಡೆ.—ಡಿಮಾಂಡ್ ನಂಬರ್ ಒಂದರ ಬಗ್ಗೆ ಮಾನ್ಯ ದೇವೇಗೌಡರು ಡೀ ಲಿಮಿಟೇಷನ್ ಬಗ್ಗೆ ಹೇಳಿದರು. ಮತ್ತೆ ಎಲೆಕ್ಷನ್ ನಡಿಸುವ ಬಗ್ಗೆ ಹೇಳಿದರು. ಡಿ ಲಿಮಿಟೇಷನ್ ಕಮಿಟಿಗೆ ಅವರು ಸದಸ್ಯರಾಗಿದ್ದಾರೆ. ನಾವು ಹೇಳಿರತಕ್ಕಂಥ ವಾದವನ್ನು ಎಲ್ಲವನ್ನು ಒಪ್ಪಿಕೊಳ್ಳದಿದ್ದರೂ ಬಳ್ಳಾರಿ ಜಿಲ್ಲೆಯ ವಿಚಾರವಾಗಿ ನಾವು ಏನು ನಿಮ್ಮ ಮುಂದೆ ಇಟ್ಟಿದ್ದೇವೆ ಅದೇ ರೀತಿ ಬೇರೆ ಬೇರೆ ಜಿಲ್ಲೆಗಳಲ್ಲಿ ತಾವು ರಾಜಕೀಯವಾಗಿ ಒಪ್ಪಿಕೊಳ್ಳಲಿಕ್ಕೆ ಆಗುವುದಿಲ್ಲವೆಂದು ಹೇಳಿದಿರಿ. ಆದರೆ ಅದನ್ನು ನಾನು ಒಪ್ಪುವುದಕ್ಕೆ ಆಗುವುದಿಲ್ಲ. After all it is functioning in an impartial way. It may not agree to all that we say but I do not think we can give political motives to the functioning of the Election Commission ಎಲೆಕ್ಟೋರರ್ ರೋಲ್ಸ್ ತಿದ್ದುವ ಕೆಲಸ ಎಲ್ಲಾ ರಾಜಕೀಯ ಪಕ್ಷಗಳಿಗೆ ಸೇರಿರುವ ಜವಾಬ್ದಾರಿ. ಈ ಸಂದರ್ಭವನ್ನು ಉಪಯೋಗಿಸಿ ಎಲೆಕ್ಷನ್ ಬಗ್ಗೆ ಮಾತನಾಡಿದ್ದೀರಿ? ಕೇರಿ ಕೇರಿಗೆ ಹೋಗುತ್ತಾರೆಂದು. ನಾನು ಇಂಗ್ಲೆಂಡಿನಲ್ಲಿ ನೋಡಿದ್ದೇನೆ. ಅಲ್ಲಿ ಚಿಕ್ಕ ಚಿಕ್ಕ ಕಾನ್ಸ್ಟಿಟುಯೆನ್ಸಿ ಇರುವುದರಿಂದ ಅವರು ಮನೆಮನೆಗೆ ಹೋಗಲಿಕ್ಕೂ ಸಾಧ್ಯವಿದೆ. ಆದರೆ ನಮ್ಮಲ್ಲಿ ಕಾನ್ಸಿಟಿಯೆನ್ಸಿ ಬಹಳ ದೊಡ್ಡದು ಇರುವುದರಿಂದ ಮನೆಮನೆಗೆ ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿ ಹೋಗುವುದಕ್ಕೆ ಸಾಧ್ಯವಿದ್ದರೆ ಅದರಲ್ಲಿ ಏನು ತಪ್ಪು ಇಲ್ಲ. ಇಂಟರ್‌ಮೀಡಿಯೇಷನ್ ಮೂಲಕ ಎಲೆಕ್ಷನ್ ನಡೆಸುವ ಪದ್ಧತಿ ಹೋದರೆ ಚುನಾವಣೆಯಲ್ಲಿ ಬಡ ಜನರನ್ನು ನೋಡಬಹುದು.

ಶ್ರೀ ಎ. ನಂಜಪ್ಪ.—ಚುನಾವಣೆ ಕಾಲದಲ್ಲಿ ಬಡಜನರು ಕಾಣುತ್ತಾರೆ ಬೇರೆ ಟೈಮಿನಲ್ಲಿ ತಮ್ಮಗಳ ಕಣ್ಣಿಗೆ ಕಾಣುವುದಿಲ್ಲವೇ?

ಶ್ರೀ ಎಚ್. ಡಿ. ದೇವೇಗೌಡ.—ತಾವು ಬಂದು ನೋಡುವುದಾದರೆ ಇವತ್ತು ನಾನು ಗುಡಿಸಿಲಿನಲ್ಲಿ ಇದ್ದೇನೆ. ನಾನು ಹೇಳಿದ್ದು ಎಲೆಕ್ಷನ್ ಸಮಯದಲ್ಲಿ ಜನರ ಗುಂಪನ್ನು ಇಟ್ಟು ಕೊಂಡು ಹಣ ಮತ್ತು ಹೆಂಡದ ಸೀಸೆ ಇಟ್ಟುಕೊಂಡು ಹೋಗುವುದು ಸರಿಯಲ್ಲ. ತಾವಾದರೂ ಮಹಲ್‌ಗಳಲ್ಲಿ ವಾಸಮಾಡತಕ್ಕಂಥವರು.

ಶ್ರೀ ಕೆ. ಎಚ್. ಹನುಮೇಗೌಡ.—ಅರಸೀಕೆರೆ ಎಲೆಕ್ಷನ್ ಕಳೆದು 2 ತಿಂಗಳಾಯಿತು. ತಾವು ಎಷ್ಟು ಸಾರಿ ಆ ಬಡಜನತೆಯನ್ನು ನೋಡಲಿಕ್ಕೆ ಹೋಗಿದ್ದೀರಿ ಸ್ವಾಮಿ?

ಶ್ರೀ ಎಂ. ವೈ. ಘೋರ್ಪಡೆ.—ಹೆಂಡ ಮತ್ತು ಹಣದಿಂದ ಚುನಾವಣೆ ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬೇಕಾಗುತ್ತದೆ. ಇನ್ನು ಮಂತ್ರಿಗಳ ಕಾರುಗಳ ಬಗ್ಗೆ ಹೇಳಿದರು. ಮಂತ್ರಿಗಳು ಪ್ರವಾಸ ಹೋಗುವುದಕ್ಕೆ ಸಾರ್ವಜನಿಕರ ಕೆಲಸಕಾರ್ಯಗಳನ್ನು ಮಾಡುವುದಕ್ಕೋಸ್ಕರ ಹೋಗಬೇಕಾಗುತ್ತದೆ. ಅವರು ಓಡಾಡುವುದಕ್ಕೆ ಅಂಬಾಸಿಡರ್ ಕಾರನ್ನು ಕೊಡದೆ ಹೋದರೆ ಅವರ ಜವಾಬ್ದಾರಿಯನ್ನು ನಿರ್ವಹಿಸುವುದಾದರೂ ಹೇಗೆ ಸ್ವಾಮಿ?

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಪೋಲಿಂಗ್ ಬೂತ್‌ನೊಳಗೆ ಹೋದರೆ ಜನಗಳು ಕತ್ತು ಹಿಡಿದುಕೊಂಡು ಹೊರಗೆ ಎಳೆದುಕೊಂಡು ಬಂದರೆ ಹೇಗೆ ಸ್ವಾಮಿ?

ಶ್ರೀ ಎಂ. ವೈ. ಘೋರ್ಪಡೆ.—ಇನ್ನು ಪಬ್ಲಿಕ್ ಸರ್ವೀಸ್ ಕಮೀಷನ್ ಛೇರ್‌ಮನ್ ನೇಮಕದ ಬಗ್ಗೆ ಒಳ್ಳೆಯ ಕೆಲಸಮಾಡಿದೆವೆಂದು ಅದಕ್ಕೆ ಅವರ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅದರ ಸದಸ್ಯರು ಜಾಸ್ತಿಯಾದರು. ಖರ್ಚನ್ನು ಕಡಿಮೆ ಮಾಡಬೇಕೆಂದು ಹೇಳಿದರು. ಆದರೆ ಅಲ್ಲಿಯ ಕೆಲಸ ಕಾರ್ಯಗಳು ಜಾಸ್ತಿಯಾಗುತ್ತಿರುವುದರಿಂದ ಜಾಸ್ತಿ ಸದಸ್ಯರನ್ನು ಮಾಡದೆ ಹೋದರೆ ಕೆಲಸ ಕಾರ್ಯಗಳು ಡಿಲೇ ಆಗುತ್ತವೆ. ಇನ್ನು ಪೋಲೀಸ್ ಖಾತೆಯ ವಿಚಾರದಲ್ಲಿ ಖರ್ಚು ಜಾಸ್ತಿಯಾಗ್ತ

ತ್ತಿದೆ ಎಂದು ಹೇಳಿದ್ದಾರೆ ಅದರ ಬಗ್ಗೆ ಹೇಳುವುದಾದರೆ ಆಲ್ ಇಂಡಿಯಾ ಆವರೇಜ್ ತೆಗೆದುಕೊಂಡರೆ ನಮ್ಮ ರಾಜ್ಯದ್ದು ಬಹಳ ಕಡಿಮೆ ಇದೆ. ಅದನ್ನು ಐದನೇ ಪ್ಲಾನಿಂಗ್ ಕಮೀಷನ್‌ನವರು ಕೂಡ ಎಲ್ಲಾ ರಾಜ್ಯಗಳಿಗಿಂತ ಕರ್ನಾಟಕ ರಾಜ್ಯದ ಪೋಲೀಸ್ ಇಲಾಖೆಯ ಖರ್ಚು ಕಡಿಮೆ ಇದೆಯೆಂದು ಹೇಳಿದ್ದಾರೆ. ಅಲ್ಲಿ ಕಾರು ಜೀಪುಗಳು ತುಂಬಾ ಹಳೆಯದಾಗಿದ್ದು ಅವುಗಳನ್ನು ರಿನ್ಯೂ ಮಾಡಬೇಕಾಗುತ್ತದೆ. ಹೊಸ ವೇಹಿಕಲ್ಸ್‌ನ್ನು ಕೊಡಬೇಕಾಗುತ್ತದೆ. ಹಳೇ ವೇಹಿಕಲ್ಸ್ ಇಟ್ಟುಕೊಂಡರೆ ಅನ್ ಎಕಾನಾಮಿಕ್ ಆಗಿ ಖರ್ಚು ಜಾಸ್ತಿಯಾಗುತ್ತದೆ ಮತ್ತು ಪೋಲೀಸ್ ಇಲಾಖೆ ಸ್ವಲ್ಪ ಖರ್ಚು ಜಾಸ್ತಿ ಮಾಡಬೇಕಾಗುತ್ತದೆ. ಇದು ಏನು ದೊಡ್ಡ ತಪ್ಪಲ್ಲವೆಂದು ಹೇಳುತ್ತೇನೆ. ಇನ್ನು ರೀ ಅಪ್ರೋಪ್ರಿಯೇಟ್ ಬಗ್ಗೆ ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿದೆ. ತಾವು ಹೇಳಿದ ಪ್ರಕಾರ ಎಷ್ಟೇ ತಪ್ಪು ಇದ್ದಾಗ್ಯೂ ಬಿಲ್ಡಿಂಗ್ಸ್‌ಗೆ ಎಷ್ಟೊಂದು ಅಗತ್ಯತೆ ಇದೆ ಎಂಬುದನ್ನು ನಮ್ಮ ಸ್ಪೀಕರ್ ರವರು ಹೇಳಿದ ಮೇಲೆ ನಾವು ಮಾಡಬೇಕಾಯಿತು, ಮಾಡಿದ್ದೇವೆ. ವರ್ಕ್ಸ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಿಲ್ಲ. ಎಸ್ಟಾಬ್ಲಿಷ್‌ಮೆಂಟ್ ಖರ್ಚಿನಲ್ಲಿ ಕಡಿಮೆಮಾಡಿ ವರ್ಕ್ಸ್ ಎಕ್ಸಪೆಂಡಿಚರ್ ಎಷ್ಟು ಮಾಡಬೇಕೋ ಅಷ್ಟು ಮಾಡಿದ್ದೇವೆ. ಅದರಲ್ಲಿ ಏನಾದರೂ ತಮಗೆ ಅನುಮಾನವಿದ್ದರೆ ಅದು ಸರಿಯಾದುದಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಲೆಜಿಸ್ಲೇಚರ್ ಹೋಂ ಬಿಲ್ಡಿಂಗ್ ಕಟ್ಟುವುದಕ್ಕೆ ಕಷ್ಟ ಇದೆ ಎಂದು ಹೇಳಿದರೆ I can quote several instances where unnecessary expenditure which could have been avoided have been spent. ಉದಾಹರಣೆಗೆ ಹುಲಕೆರೆದೊಡ್ಡಿಯೊಳಗೆ ಒಂದು ಲಕ್ಷ ರೂಪಾಯಿ ಖರ್ಚುಮಾಡಿ ಟಿ. ಬಿ. ಕಟ್ಟಿದ್ದೀರಿ ಇಂಥಾದ್ದು ಎಷ್ಟು ಹೇಳಲಿ ನಾನು. ನಿಮ್ಮ ತತ್ವ, ಫಿಲಾಸಫಿ ಸುಮ್ಮನೆ ಏತಕ್ಕೆ ಹೇಳುತ್ತೀರಿ ?

Sri M. Y. GHORPADE.—So for as P. W. D. is concerned, the Leader of the Opposition has raised objections in regard to letter of credit. So far as P.W.D. is concerned expenditure was approved by this House. But the economy cut has not been effected at all by etter of credit as expendsture has been more than what was approved llong with the economy. Therefore the position is different from what the Leader of Opposition has stated. ಲೆಜಿಸ್ಲೇಚರ್ ಹೋಂ ಬಗೆ ಅಧ್ಯಕ್ಷರಿಗೆ ಗೊತ್ತಿರುವ ಹಾಗೆ ಅವರು ಏನು ಹೇಳುತ್ತಾರೆ ಅದರ ಪ್ರಕಾರ ಖಂಡಿತ ಮಾಡುತ್ತೇವೆ. ಅದನ್ನು ಮಾಡಿದರೆ ತಪ್ಪೇನೂ ಅಲ್ಲ. ಅದು ಅವಶ್ಯಕವಾಗಿರುವವಂಥ ಕೆಲಸ ಇಷ್ಟು ಹೇಳಿ ಈ ಸಭೆ ಯವರು ಈ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನ್ನು ಸಂಪೂರ್ಣವಾಗಿ ಒಪ್ಪುತ್ತಾರೆಂದು ನಾನು ನಂಬಿದ್ದೇನೆ.

MADAM SPEAKER.—Now I Put the motion. the vote of the House The question is :

"That the Karnataka Appropriation Bill, 1975. be taken into consideration."

The motion was adopted

CLAUSES 2,3 AND SCHEDULE

MADAM SPEAKER.—I will take up clause by clause for consideration of the Bill

The question is :

"The clauses 2, 3 and the Schedule do stand part of the Bill."

The motion was adopted

Cluuse 2, 3 nd the Schedule were odded to the Bsll

CLAUSE 1 Etc

MADAM SPEAKER.—The question is :

"That Clause 1, the long Title, the Preamble and the enacting-formul do stand part of the Bill.

The motion was adopted

Clruse 1, the long Title, that Preamble and the enacting formul were added to the Bill.

Motion to Pass

Sri M. Y. GHORPADE.—I move :

"That the Karnataka Appropriation Bill, 1975, be passed."

MADAM SPEAKER.—The question is :

"That the Karnataka Appropriation Bill, 1975, be passed."

The motion was adopted and the Bill ws pssed

The Karnataka Civil Services (Classification and Scale of pay of Non-Graduate Junior Engineers of the Public Works Department) Bill 1975

Motion to Consider

Sri H. M. CHANNABASAPPA.—Minister for Public Works I move :

"That the Karnataka Civil Services (Classification and Scale of pay of Non-graduate Junior Engineers of the Public Works Department Bill 1975 be taken into consideration."

MADAM SPEAKER.—Motion moved :

"That the Karnataka Civil Services (Classification and Scale of pay of Non-graduate Junior Engineers of the Public Works Department Bill 1975 be taken into consideration."

†Sri H. M. CHANNABASAPPA.–I would like to make a few remarks about this Bill. As the House is aware that after States Re-organisation both the Graduate and Non-Graduate Engineers from 5 different States came to join the Mysore State and these 5 different States are, the old Mysore, Bombay, Hyderabad, Madras, and Coorg. Different categories of Graduate and Non-Graduate Engineers of these 5 States had to be integrated. The Graduates who were included along with the Non-Graduates were srated in the same grade with advance increments. After the States Re-organisation is over, the